

ನಮ್ಮ ಮಾನಸ

ಸಂಪುಟ : 2 ಜನವರಿ 2009 ಸಂಚಿಕೆ : 9

ನಮ್ಮ ಮಾನಸ

ಜನವರಿ 2009

ಸಂಪುಟ : 2 ಸಂಚಿಕೆ : 9

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road,
Raghavanagara
New Timberyard Layout
Bangalore - 560 026.
© : 26757159

ಪರಿವಿಡಿ

•

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಓದುಗರ ಗಮನಕ್ಕೆ

ಓದುಗರೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ 'ನಮ್ಮ ಮಾನಸ'ದ ಪ್ರಕಟಣೆ ಸಾಧ್ಯವಾಗಿದೆ. ಪತ್ರಿಕೆಗೆ ಓದುಗರ ಚಂದಾ ಹಣವೇ ಜೀವಾಳ. ಚಂದಾಹಣ ಕಳುಹಿಸಿ ಮತ್ತು ಚಂದಾ ನವೀಕರಿಸಬೇಕಾದವರು ನವೀಕರಿಸಿ ಪತ್ರಿಕೆಯನ್ನು ಆರ್ಥಿಕವಾಗಿ ಸದೃಢಗೊಳಿಸಬೇಕೆಂದು ವಿನಮ್ರವಾಗಿ ಕೋರುತ್ತೇವೆ.

ವಾರ್ಷಿಕ ಚಂದಾ – ರೂ. 100/-

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ, ವಿಜಯನಗರ
ಮೈಸೂರು – 570 017

ಮಹಿಳಾ ಮೀಸಲಾತಿ

1996ರ ಸೆಪ್ಟೆಂಬರ್ 12ರಂದು ಯುನೈಟೆಡ್ ಫ್ರಂಟ್ ಸರ್ಕಾರ ಮಹಿಳಾ ಮೀಸಲಾತಿಯ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿತ್ತು. ದಶಕಗಳೇ ಕಳೆದರೂ ಈ ಮಸೂದೆ ಇದುವರೆಗೂ ಪಾಸಾಗದೇ ಇರುವುದಕ್ಕೆ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆಯೇ ಮುಖ್ಯ ಕಾರಣವಾಗಿದೆ.

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು 'ರಾಜಕೀಯ ನಿರ್ಧಾರ' ತೆಗೆದುಕೊಳ್ಳುವಲ್ಲಿ ಭಾಗವಹಿಸದೇ ಇರುವುದನ್ನು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವವೆಂದು ಹೇಳಲು ಸಾಧ್ಯವೇ? ಮತದಾನದ ಹಕ್ಕನ್ನು ನಮ್ಮ ದೇಶದ ಮಹಿಳೆಯರು ಮೊದಲು ಪಡೆದರೆಂಬ ಹೆಗ್ಗಳಿಕೆ ನಮ್ಮ ದೇಶದ್ದಾಗಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ? ವಿಶ್ವದ 95 ದೇಶಗಳಲ್ಲಿ ಮಹಿಳೆಯರನ್ನು ರಾಜಕೀಯ ಮುಖ್ಯ ವಾಹಿನಿಯಲ್ಲಿ ತೊಡಗುವಂತೆ ಮಾಡಲು ವಿವಿಧ ರೀತಿಯ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ. ಆದರೆ ನಮ್ಮ ದೇಶದ ರಾಜಕೀಯ ಪಕ್ಷಗಳಲ್ಲಿ ಪುರುಷಪ್ರಧಾನ ಶಕ್ತಿಗಳು ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಹಲವಾರು ರೀತಿಯ ನೆಪಗಳನೊಡ್ಡಿ ತಡೆಯುತ್ತಿರುವುದು ಸ್ಪಷ್ಟವಾಗಿದೆ.

ಮಹಿಳೆಯರ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಅಸಮಾನತೆಯನ್ನು ಅಳಿಸುವುದೇ ಮಹಿಳಾ ಮೀಸಲಾತಿಯ ಉದ್ದೇಶವಾಗಿದೆ. ಆದರೆ ಹಲವಾರು ಬಾರಿ ಮಸೂದೆಯನ್ನು ಮಂಡಿಸಿದಾಗಲೂ ಪಾಸಾಗದೇ ಇರುವುದು ರಾಜಕೀಯ ಪಕ್ಷಗಳ ಟೊಳ್ಳುತನವನ್ನು ಎತ್ತಿ ತೋರಿಸುತ್ತದೆ. ತೀವ್ರವಾಗಿ ಬೆಳೆಯುತ್ತಿರುವ ಕೋಮುವಾದ ಹಾಗೂ ಪ್ರಸ್ತುತ ರಾಜಕೀಯ ಪರಿಸ್ಥಿತಿ, ಭಯೋತ್ಪಾದನೆಯ ಬೆದರಿಕೆಯ ಹಿನ್ನೆಲೆಯಲ್ಲಿ "ಮಹಿಳಾ ಮೀಸಲಾತಿಯ" ವಿಷಯ ಮರೆತು ಹೋಗಿದೆಯೆನ್ನುವಷ್ಟು ಮೂಲೆಗುಂಪಾಗಿದೆ. ಮಹಿಳಾ ಮೀಸಲಾತಿಯ ಪ್ರಶ್ನೆಯಲ್ಲಿ ಒಳಮೀಸಲಾತಿಯ ಬಗ್ಗೆ ರಾಜಕೀಯ ಪಕ್ಷಗಳ ಭಿನ್ನಾಭಿಪ್ರಾಯಗಳಿಂದಾಗಿ ಈ ತಡೆಯುಂಟಾಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ರಾಜಕೀಯ ಪಕ್ಷಗಳ ಅಭಿಪ್ರಾಯಗಳನ್ನು ವಿವರವಾಗಿ ಸಂಗ್ರಹಿಸುವುದರ ಮೂಲಕ, ರಾಜಕೀಯ ಪಕ್ಷಗಳ ನಡುವೆ ಒಮ್ಮತ ಅಭಿಪ್ರಾಯವನ್ನು ಮೂಡಿಸುವ ಉದ್ದೇಶದಿಂದ ಸಮಿತಿಯನ್ನು ರಚಿಸಿದ್ದು, ಈ ಸಮಿತಿ 2009ರ ಏಪ್ರಿಲ್‌ನಲ್ಲಿ ತನ್ನ ವರದಿಯನ್ನು ನೀಡಬೇಕಾಗಿದೆ. ಈ ಸಮಿತಿ ಈಗಾಗಲೇ ವಿವಿಧ ರಾಜ್ಯಗಳಿಗೆ ಭೇಟಿ ನೀಡಿ, ಪ್ರಾದೇಶಿಕ ಪಕ್ಷಗಳ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದು, ಇನ್ನೂ ಕೆಲವು ರಾಜ್ಯ ಗಳಿಗೆ ಭೇಟಿ ನೀಡಬೇಕಾಗಿದೆ.

ಈಗಾಗಲೇ ಸ್ಥಳೀಯ ಹಂತದಲ್ಲಿ ಮಹಿಳೆಯರು ಮೀಸಲಾತಿಯ ಸೌಲಭ್ಯದಿಂದಾಗಿ ಚುನಾವಣೆಯಲ್ಲಿ ಆಯ್ಕೆಯಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅನುಭವ ನಮ್ಮ ಮುಂದಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗದ - ಜಾತಿಯ ಮಹಿಳೆಯರು ಸ್ಥಳೀಯ ಸಂಸ್ಥೆಗಳಲ್ಲಿ ಆಯ್ಕೆಯಾಗಿ, ರಾಜಕೀಯ ಅಧಿಕಾರ ಪಡೆದು ನೀಡಿದ ಕೊಡುಗೆಯನ್ನು ಪ್ರಾಥಮಿಕ ಹಂತದಲ್ಲಿ ಅಳೆಯಲು ಸಾಧ್ಯವಿಲ್ಲವಾದರೂ ಒಂದು ಮೈಲಿಗಲ್ಲನ್ನು ಸ್ಥಾಪಿಸಿರುವುದು ಮಹತ್ವದ ಸಂಗತಿಯಾಗಿದೆ. ಮಹಿಳಾ ಮೀಸಲಾತಿಯಿಂದಾಗಿ ಸ್ಥಳೀಯ ಮಟ್ಟದಿಂದ ಉನ್ನತಮಟ್ಟ ಅಥವಾ ಹಂತದವರೆಗೂ ಮೂರನೇ ಒಂದು ಭಾಗದಷ್ಟು ಮಹಿಳೆಯರ ರಾಜಕೀಯ ಪ್ರವೇಶ ಸಾಧ್ಯವಾಗುತ್ತದೆ.

ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹಿಂದುಳಿದ, ಪರಿಶಿಷ್ಟ ವರ್ಗ ಹಾಗೂ ಜಾತಿ, ಅಲ್ಪಸಂಖ್ಯಾತ ಮಹಿಳೆಯರಿಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿಯನ್ನು ನೀಡಬೇಕೆಂಬ ಬಲವಾದ ಬೇಡಿಕೆಯನ್ನು ಹಲವು

ರಾಜಕೀಯ ಪಕ್ಷದ ನಾಯಕರು ಮುಂದಿಟ್ಟಿದ್ದರು. ಈ ರೀತಿಯ ಮೀಸಲಾತಿ ಇಲ್ಲದಿದ್ದರೆ, ಪುನಃ ಉಳ್ಳವರು ಹಾಗೂ ಬಲಿಷ್ಠ ಮಹಿಳೆಯರು ಮಾತ್ರ ಅವಕಾಶಗಳನ್ನು ಪಡೆಯುತ್ತಾರೆ. ದುರ್ಬಲ ಮಹಿಳೆಯರು ಈ ವರ್ಗದ ಮಹಿಳೆಯರೊಂದಿಗೆ ಪೈಪೋಟಿ ನಡೆಸಲು ಸಾಧ್ಯವಾಗದೇ ಪುನಃ ಮೂಲೆಗುಂಪಾಗುತ್ತಾರೆ." ಎನ್ನುವುದು ಇವರ ವಾದ. ಚಾರಿತ್ರಿಕವಾಗಿ ಅವಕಾಶವಂಚಿತರಿಗೆ ಅವಕಾಶ ನೀಡುವುದು ಮೀಸಲಾತಿಯ ಉದ್ದೇಶವಾದರೆ, ಮಹಿಳೆಯರಲ್ಲಿಯೇ ಅವಕಾಶ ವಂಚಿತರಿಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿಯನ್ನು ನೀಡುವುದು ನ್ಯಾಯಪರವಾದ ನಿಲುವಾಗುತ್ತದೆ. ಮಹಿಳಾ ಮೀಸಲಾತಿಯ ಪ್ರಮಾಣದ ಬಗ್ಗೆ ರಾಜಕೀಯ ಪಕ್ಷಗಳು ಒಮ್ಮತಕ್ಕೆ ಬರಬೇಕಾಗುತ್ತದೆ. ಮೊದಲು ರಾಜಕೀಯ ಪಕ್ಷಗಳು ತಮ್ಮ ಪಕ್ಷದೊಳಗೆ ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಿಕೊಡಬೇಕಾಗುತ್ತದೆ. ಚುನಾವಣೆಯ ಸಂದರ್ಭದಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಬೇಕಾಗುತ್ತದೆ. ಈ ಮೂಲಕ ರಾಜಕೀಯ ಪಕ್ಷಗಳು ತಮ್ಮ ಪ್ರಾಮಾಣಿಕ ಕಾಳಜಿಯನ್ನು ತೋರಿಸಬೇಕಾಗುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ನಮ್ಮ ದೇಶದ ರಾಜಕೀಯದಲ್ಲಿನ ಭ್ರಷ್ಟಾಚಾರ, ಚುನಾವಣೆಯಲ್ಲಿರುವ ಅಪರಾಧೀಕರಣ, ಹೆಂಡ, ಹಣದ ಹಂಚಿಕೆಯ ಸ್ಥಿತಿಯಲ್ಲಿ ಜನಸಾಮಾನ್ಯರು ರಾಜಕೀಯ ಪ್ರವೇಶ ಮಾಡದಂತಹ ವಾತಾವರಣ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಮೀಸಲಾತಿಯ ಮೂಲಕ ರಾಜಕೀಯ ಪ್ರವೇಶ ಮಾಡುವುದರಿಂದ, ಸ್ವಲ್ಪಮಟ್ಟಿಗಾದರೂ ಪ್ರಜಾಪ್ರಭುತ್ವ ಮೌಲ್ಯಗಳು ನೆಲೆಯೂರಲು ಸಾಧ್ಯವಾಗಬಹುದು.

* * *

ಭಯೋತ್ಪಾದನೆ ಹಾಗೂ ಯುದ್ಧ – ಎರಡೂ ಸಹ ಇಂದಿನ ಜಗತ್ತಿನಲ್ಲಿ ಮನುಷ್ಯರ ಜೀವನವನ್ನು ಆತಂಕಕ್ಕೆ ಒಡ್ಡುತ್ತಿವೆ. ಚಾರಿತ್ರಿಕ ಕಾಲದಿಂದಲೂ ಮಹಿಳಾ ಚಳವಳಿ – ಬೇರೆ ಬೇರೆ ಹಂತದಲ್ಲಿ ಇವೆರಡರ ವಿರುದ್ಧ ಹೋರಾಟ ನಡೆಸುತ್ತಲೇ ಬರುತ್ತಿದೆ. ಪ್ರಥಮ ಹಾಗೂ ದ್ವಿತೀಯ ಮಹಾಯುದ್ಧದಲ್ಲಿ ಸೈನಿಕರ, ಯುದ್ಧದ ಉನ್ಮಾದದಲ್ಲಿ ನೊಂದ ಹೆಂಗಸರ ಕತೆಗಳು ನಮ್ಮ ಮುಂದಿವೆ. ಇಂತಹ ಭಯಂಕರ ಕತೆಗಳನ್ನು ಓದು ಓದುತ್ತಲೇ ಭಯೋತ್ಪಾದನೆ ಹಾಗೂ ಯುದ್ಧದ ದೃಶ್ಯಗಳನ್ನು ವೀಕ್ಷಿಸುತ್ತಿದ್ದೇವೆ. ಗಾಜಾದಲ್ಲಿ ಸಾವಿರಾರು ಮಕ್ಕಳು, ತಾಯಂದಿರು ಹೆಣವಾಗುತ್ತಿದ್ದಾರೆ. ಭಯೋತ್ಪಾದನೆಯ ಹಿನ್ನೆಲೆಯಲ್ಲಿ ಪಾಕಿಸ್ತಾನ ಹಾಗೂ ಭಾರತ ಯುದ್ಧದ ಮಾತು–ಕತೆಯೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಿವೆ. ಚರಿತ್ರೆಯ ಪುಟಗಳು ಯುದ್ಧ ಹಾಗೂ ಕೋಮು ಭಯೋತ್ಪಾದನೆಯ ಹಿನ್ನೆಲೆಯಲ್ಲಿ ಮನುಷ್ಯನ ವಿನಾಶದ ಕತೆಗಳನ್ನೇ ಹೇಳುತ್ತಿರುವುದರಿಂದ ಹಾಗೂ ಮನುಷ್ಯರ ಬದುಕುವ, ಹೋರಾಟದ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಸಿದುಕೊಳ್ಳುವುದನ್ನು ಸ್ಪಷ್ಟಪಡಿಸುವ ಹಿನ್ನೆಲೆಯಲ್ಲಿ ಇಂದು ಮಹಿಳಾ ಚಳವಳಿ ಭಯೋತ್ಪಾದನೆ ಹಾಗೂ ಯುದ್ಧದ ವಿರುದ್ಧ ಧ್ವನಿ ಎತ್ತಿ ಮಾತನಾಡುವುದರ ಜೊತೆಗೆ ಒಂದು ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸುವ ಜರೂರಿ ಅಗತ್ಯವಿದೆ. ಭಯೋತ್ಪಾದನೆಯನ್ನು ನಿಗ್ರಹಿಸುವ ನೆಪದಲ್ಲಿ ಯಾವುದೇ ಕೋಮುವಾದಿ ಪ್ರಭುತ್ವ ನಾಗರೀಕರ ಪ್ರಜಾಪ್ರಭುತ್ವದ ಹಕ್ಕುಗಳನ್ನು ಕಸಿದುಕೊಳ್ಳುವುದನ್ನು 'ನಮ್ಮ ಮಾನಸ' ಖಂಡಿಸುತ್ತದೆ.

❑

"ಅಕ್ಕಮಹಾದೇವಿಯ ದ್ವೈತ"ದ ಜೊತೆ ವೀಣಾ ಬನ್ನಂಜೆ ಪಯಣ ಚರಿತ್ರೆ–ಮಿಥಕಗಳ ಮರುಓದು

(ಸ್ತ್ರೀವಾದಿ ದೃಷ್ಟಿಕೋನ)

● ಬಿ.ಎನ್.ಸುಮಿತ್ರಾಬಾಯಿ

'ಅಕ್ಕಮಹಾದೇವಿಯ ದ್ವೈತ'–ವೀಣಾ ಬನ್ನಂಜೆಯವರು ಎಂ.ಫಿಲ್ ಪದವಿಗಾಗಿ ನಡೆಸಿದ ಸಂಶೋಧನೆಯ ಫಲವಾಗಿ ಹೊಮ್ಮಿ ಬಂದ ಸಂಶೋಧನಾ ಪ್ರಬಂಧ–ಎಂಬುದು ಈ ಕೃತಿಗೆ ಒಂದು ಚಾರಿತ್ರಿಕ ಸಂದರ್ಭದ ಚೌಕಟ್ಟನ್ನು ಒದಗಿಸುತ್ತದೆ. ಕಳೆದ ಶತಮಾನದ ತೊಂಬತ್ತರ ದಶಕದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಿದ್ದ ಸ್ತ್ರೀವಾದಿ ತಾತ್ವಿಕತೆಯನ್ನು ಆಧರಿಸಿ ವೀಣಾ ಬನ್ನಂಜೆಯವರು ನಡೆಸಿರುವ ಅಕ್ಕಮಹಾದೇವಿಯ ವಚನಗಳ ಮತ್ತು ಆಕೆಯನ್ನು ಕುರಿತಂತೆ ಪ್ರಚಲಿತವಿರುವ ಚರಿತ್ರೆಯ ಮರುಓದುವಿಕೆ ಇದಾಗಿದೆ.


'ಅಕ್ಕಮಹಾದೇವಿ ನನ್ನ ಅತ್ಮಸಂಗಾತಿ' ಎಂದು ಹೇಳುವ ವೀಣಾಗೆ ಮೂರನೆಯ ತರಗತಿಯಲ್ಲಿ ಕಲಿಯುತ್ತಿದ್ದಾಗಿನಿಂದ ಅಕ್ಕನ ವ್ಯಕ್ತಿತ್ವ ಒಂದು ದೊಡ್ಡ ಆಕರ್ಷಣೆ, ಸೆಳೆತ. ಅವಳೊಳಗಿನ ನಿಜವನ್ನು ಅರ್ಥಮಾಡಿಕೊಳ್ಳಲೇಬೇಕೆಂಬ ಹಂಬಲ ವೀಣಾ ಬೆಳೆದಂತೆ ಹೆಚ್ಚಾಗತೊಡಗಿತು. ಮಾತ್ರವಲ್ಲ; ಈ ಎಂ.ಫಿಲ್ ಸಂಶೋಧನಾ ಪ್ರಬಂಧ ಎಂಬುದು ಕೇವಲ ಪದವಿ, ಬಡ್ತಿಗಾಗಿ ನಡೆಸಿದ ಬೌದ್ಧಿಕ ಸೆಣಸಾಟವಾಗಿಲ್ಲ; ಅದು ವೀಣಾ ಅವರು ಮನದಾಳದಲ್ಲಿ ನಡೆಸಿರುವ 'ಬುದ್ಧಿ–ಭಾವಗಳ ವಿದ್ಯುದಾಲಿಂಗನ' ಎಂಬ ಕುವೆಂಪು ವಿಚಾರದ ರೀತಿಯಲ್ಲಿ ಅತ್ಯಂತ ಸೃಜನಶೀಲ, ಸಂವೇದನಾಶೀಲ ಅಭಿವ್ಯಕ್ತಿಯಾಗಿ ರೂಪು ತಳೆದಿದೆ. ಹೀಗಾಗಿ ಈ ಕೃತಿಯ ಓದುವಿಕೆ ಒಂದು ಅನನ್ಯ ಅನುಭವ ನೀಡುತ್ತದೆ.

ಅಕ್ಕಮಹಾದೇವಿಯ ವ್ಯಕ್ತಿತ್ವ ಎಷ್ಟು ಅಪರೂಪದ್ದು, ಅನನ್ಯವಾದದ್ದು ಎಂಬುದಕ್ಕೆ ಸುಮಾರು ಕ್ರಿ.ಶ. 12ನೆಯ ಶತಮಾನದಿಂದ ಇಂದಿನವರೆಗೂ ಆಕೆಯು ಅನೇಕ ರೀತಿಯ ಚರ್ಚೆ, ಅಧ್ಯಯನ, ವಿಮರ್ಶೆ, ವ್ಯಾಖ್ಯಾನ, ಕೊಂಡಾಟ, ಆರಾಧನೆಗಳಿಗೆ ವಸ್ತುವಾಗುತ್ತಾ ಬಂದಿರುವ ಏಕೈಕ ಕನ್ನಡ ಮಹಿಳೆ ಎಂಬುದೇ ಸಾಕ್ಷಿಯಾಗಿದೆ. ಅಕ್ಕಮಹಾದೇವಿಯ ಚರಿತ್ರೆ ಮತ್ತು ಸಾಧನೆಗಳು ಎಷ್ಟೇ ಅಸಾಧಾರಣವಾದದ್ದಿರಲಿ, ಅವಳ ಬಗೆಗಿನ ಮಾಹಿತಿಗಳು ಇಷ್ಟು ದೀರ್ಘಕಾಲ ಸುರಕ್ಷಿತವಾಗಿ ಉಳಿದುಬಂದಿರುವುದಕ್ಕೆ ಬೇರೆ ಕಾರಣಗಳಿವೆ. ವೀರಶೈವ ಶಿವಶರಣರ ಭಕ್ತಿ ಆಂದೋಲನ ಅನುಭವ ಮಂಟಪಕ್ಕೆ ಮಹಿಳೆಯರಿಗೂ ಪ್ರವೇಶ ನೀಡಿತ್ತು ಎಂಬ ಹಿರಿಮೆ ಈ ನಾಡಿಗೆ ಇದೆ. ಆದರೆ ಅಲ್ಲಿದ್ದ ಪ್ರಮುಖ ಶರಣರೆಲ್ಲರೂ ಭಕ್ತಿ ಸಾಧನೆಯಲ್ಲಿ ತಮಗಿಂತ ಮಿಗಿಲಾದವಳೆಂಬುದಾಗಿ ಅಕ್ಕ ಮಹಾದೇವಿಯನ್ನು ಕೊಂಡಾಡಿ ಗೌರವಿಸಿದ್ದರೆಂಬುದು ಬಹುಮುಖ್ಯ ಸಂಗತಿ.

ಅಲ್ಲಮಪ್ರಭು, ಬಸವಣ್ಣರಾದಿಯಾಗಿ ಶಿವಶರಣ ನಾಯಕ ವರ್ಗದಿಂದ ಮಾನ್ಯಮಾಡಲ್ಪಟ್ಟ ವ್ಯಕ್ತಿಯಾದ್ದರಿಂದಲೇ ಅಕ್ಕಮಹಾದೇವಿಯ ಜೀವನ ಚರಿತ್ರೆ ವೀರಶೈವ ಧಾರ್ಮಿಕ ಪರಂಪರೆಗೆ ಮಹತ್ವದ್ದೆನಿಸಿ, ದಾಖಲಾಗುವುದು ಸಾಧ್ಯವಾಯಿತು. ಕಾಲದಿಂದ ಕಾಲಕ್ಕೆ, ಆಯಾ ಕಾಲದ ಸಾಮಾಜಿಕ–ಧಾರ್ಮಿಕ ನಿರೀಕ್ಷೆಗಳಿಗೆ ತಕ್ಕಂತೆ ಅಕ್ಕನ ಚರಿತ್ರೆಯನ್ನು ಪರಿಷ್ಕರಿಸುವ ಯತ್ನಗಳು ನಡೆದಿವೆ. ಆಕೆಯ ಜೀವನದ ಘಟನೆಗಳನ್ನೂ ಅವಳ ವ್ಯಕ್ತಿತ್ವವನ್ನೂ ಗುರುತಿಸುವುದರಲ್ಲಿ ಭಿನ್ನ ಮತಗಳು ಶೈವಕವಿಗಳು ಹಾಗೂ ಪಂಡಿತರಲ್ಲಿ ಕಾಣಿಸುವುದಕ್ಕೆ ಬಹುಶಃ ಇಂಥ ತಿದ್ದುವಿಕೆಗಳೇ ಕಾರಣವಾಗಿರಬಹುದು.

ಕಳೆದ ಇಪ್ಪತ್ತನೆಯ ಶತಮಾನದಲ್ಲಿ ಕನ್ನಡಿಗರು ಹೊರಗಿನಿಂದ ಪಡೆದುಕೊಂಡ ಮಾನವತಾವಾದಿ, ಸಮಾಜವಾದಿ ಚಿಂತನೆಗಳು ವಚನ ಯುಗವನ್ನೂ, ವಚನ ಸಾಹಿತ್ಯವನ್ನೂ ಹೊಸ ನಿಟ್ಟಿನಿಂದ ಅರ್ಥಮಾಡಿಕೊಳ್ಳಲು ಸಹಕಾರಿಯಾದವು. ಹೀಗೆ ವಿಭಿನ್ನ ವೈಚಾರಿಕ ಸಿದ್ಧಾಂತಗಳು ನಮ್ಮಲ್ಲಿ ಪ್ರಚಾರಕ್ಕೆ ಬಂದಂತೆಲ್ಲ, ವಚನ ಸಾಹಿತ್ಯದ ಮರು–ಓದುವಿಕೆಗೂ ಅವು ಕುಮ್ಮಕ್ಕು ಕೊಟ್ಟಿವೆ. ಉದಾಹರಣೆಗೆ ನವ್ಯ ವಿಮರ್ಶಕರಾದ ಎಂ.ಜಿ.ಕೆ, ಎ.ಕೆ.ರಾಮಾನುಜನ್ ರಂಥವರು ಪಶ್ಚಿಮದ Metaphysical poetsರ ವಿಶಿಷ್ಟ ಮಾದರಿಯನ್ನು ಟಿ.ಎಸ್.ಎಲಿಯಟ್ ಗುರುತಿಸಿದ ರೀತಿಯಲ್ಲೇ ವಚನಗಳಲ್ಲಿ ಹೊಸ ಆಕಾರ, ಬಂಧ, ಅರ್ಥಗಳು ಮೇಳೈಸಿರುವುದನ್ನು ಗುರುತಿಸಿಕೊಟ್ಟರು. ಅದೇ ರೀತಿ ಪಶ್ಚಿಮದಿಂದ ಬಂದ ಅನೇಕ ಹೊಸ ವಿಚಾರಗಳು ವೀರಶೈವ ಭಕ್ತಿ ಆಂದೋಲನದ ಸಂದರ್ಭದಲ್ಲಿ ಆಗಿದ್ದ ಸಾಮಾಜಿಕ ಪರಿವರ್ತನೆಯ 'ಕ್ರಾಂತಿ' ಲಕ್ಷಣಗಳನ್ನು ಗುರುತಿಸಿಕೊಳ್ಳಲು ನೆರವಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವೀಣಾ ಬನ್ನಂಜೆಯವರ ಕೃತಿ 'ಅಕ್ಕಮಹಾದೇವಿಯ ದ್ವೈತ' ಎಂಬುದು **ಸ್ತ್ರೀವಾದಿ ಚಿಂತನೆಯ ಮೂಲಕವಾಗಿ ಅಕ್ಕನ ಲಭ್ಯ ಚರಿತ್ರೆಯನ್ನು ಅವಳ ವಚನಗಳನ್ನು ಕುರಿತ ಮರುಓದಿಗೆ ಒಳಪಡಿಸುವ ಕೃತಿಯಾಗಿದೆ** ಎಂಬುದಕ್ಕೂ ವಿವಿಧ ಕಾಲದ ಓದುವಿಕೆಗಳೊಂದಿಗೂ ಒಂದು ಚಾರಿತ್ರಿಕ ಸಂಬಂಧ ಏರ್ಪಡುತ್ತದೆ.

ವೀಣಾ ಅವರು ಅಕ್ಕಮಹಾದೇವಿಯನ್ನು ಕುರಿತು ಬಂದಿರುವ ಎಲ್ಲ ಬಗೆಯ ವಿಮರ್ಶೆ, ವ್ಯಾಖ್ಯಾನ, ಅಧ್ಯಯನ, ಸಂಶೋಧನೆಗಳನ್ನು ಸವಿಮರ್ಶೆವಾಗಿ ಪರಿಶೀಲಿಸುತ್ತಾರೆ. ಹಲವು ವಿದ್ವಾಂಸರು ಅಕ್ಕಮಹಾದೇವಿಯ ಒಳಗೆ ಒಬ್ಬ ಧಾರ್ಮಿಕ ವ್ಯಕ್ತಿಯನ್ನು, ಅನನ್ಯ ಸಾಧನೆ ಮಾಡಿದ ಭಕ್ತೆಯನ್ನು ಗುರುತಿಸುತ್ತಾ ಬಂದಿರುವುದರತ್ತ ಗಮನ ಸೆಳೆವ ವೀಣಾ ಭಕ್ತಿಯ ಆಚೆಗೂ ಅಕ್ಕಮಹಾದೇವಿಯ ಮಾನವೀಯ ವ್ಯಕ್ತಿತ್ವವಿರುವುದರ ಅಧ್ಯಯನಕ್ಕೆ ಯತ್ನಿಸುತ್ತಾರೆ. "ಅಕ್ಕಳನ್ನು ಕೇವಲ ಭಕ್ತೆಯಾಗಿ, ಶಿವಶರಣೆಯಾಗಿ ಅಧ್ಯಯನ ಮಾಡುವುದಕ್ಕಿಂತಲೂ ಹೆಚ್ಚಾಗಿ, ಅವಳನ್ನು ಸಾಮಾಜಿಕ ಮತ್ತು ವೈಯಕ್ತಿಕ ಬದುಕಿನ ನಡುವೆ ಇಟ್ಟು ಅಧ್ಯಯನ ಮಾಡುವುದು" ತಮ್ಮ ಪ್ರಬಂಧದ ಉದ್ದೇಶವೆಂದು ಖಚಿತಪಡಿಸುತ್ತಾರೆ. (ಪು.13). ಒಬ್ಬ ವ್ಯಕ್ತಿಯ ಸಾಮಾಜಿಕ ಅಸ್ಮಿತೆ ಮತ್ತು ವೈಯಕ್ತಿಕ ಅಸ್ಮಿತೆ ಇವೆರಡರ ನಡುವೆ ತಿಕ್ಕಾಟವುಂಟಾದರೆ, ವ್ಯಕ್ತಿಯು ಆ ಎರಡರಲ್ಲಿ ಯಾವುದಾದರೂ ಒಂದು ಅಸ್ಮಿತೆಯನ್ನು ಧಿಕ್ಕರಿಸಬೇಕಾಗುತ್ತದೆ. ಆ ರೀತಿ ಯಾವ ಅಸ್ಮಿತತೆಯನ್ನು ವ್ಯಕ್ತಿ ಧಿಕ್ಕರಿಸಬಹುದು ಇಲ್ಲವೆ, ಯಾವುದನ್ನು ವ್ಯಕ್ತಿ ಆಯ್ಕೆ ಮಾಡಿಕೊಳ್ಳಬಹುದೆನ್ನುವುದು ವ್ಯಕ್ತಿ



ಅಕ್ಕಮಹಾದೇವಿಯ ದ್ವೈತ
ಲೇ: ವೀಣಾ ಬನ್ನಂಜೆ
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು
2007. ಪುಟ: Viii+ 159
ಬೆಲೆ: ರೂ 50/–

ಸ್ವಾತಂತ್ರ್ಯಕ್ಕೆ ಬಿಟ್ಟದ್ದು. ಒಂದರ ಆಯ್ಕೆ, ಮತ್ತೊಂದರ ತಿರಸ್ಕಾರವೇ ಒಂದು ರೀತಿಯ ಕ್ರಾಂತಿ ಎನ್ನುವ ವೀಣಾ ಬನ್ನಂಜೆಯವರು ತನ್ನ ಸ್ತ್ರೀತನವನ್ನೇ ಗಂಡಸುತನಕ್ಕೆ ಸವಾಲಾಗಿ ಒಡ್ಡಿದ ಅಕ್ಕ ಲೌಕಿಕದಲ್ಲಿದ್ದೇ ಅಲೌಕಿಕ ಗಂಡನನ್ನು ಬಯಸುವ ಮೂಲಕ ಈ ವ್ಯವಸ್ಥೆಯನ್ನೇ ಪ್ರತಿಭಟಿಸಿದ್ದಾಳೆ. ಆದ್ದರಿಂದ ಅವಳ ವಚನಗಳನ್ನು ಭಕ್ತಿಯ ಆವೇಶದಲ್ಲಿ ಆದ ಸೃಷ್ಟಿ ಎಂದು ನೋಡುವುದಕ್ಕಿಂತ ಭಕ್ತಿಯ ಆವೇಶದ ಪರಿಧಿಯಾಚೆಗೂ ಅವಳ ಸಂವೇದನೆಗಳು ಆ ವಚನಗಳಲ್ಲಿ ಪ್ರಕಟವಾಗಿರುವುದು ಸಾಧ್ಯ ಎಂಬುದನ್ನು ತಮ್ಮ ಅಧ್ಯಯನದ ಕೇಂದ್ರ ಬಿಂದುವಾಗಿ ಮಾಡಿಕೊಂಡು, ಅಕ್ಕಮಹಾದೇವಿಯ ವ್ಯಕ್ತಿತ್ವದ, ಇದುವರೆಗೂ ಖಚಿತವಾಗಿ ಗುರುತಿಸಲ್ಪಡದ ಮತ್ತೊಂದು ಆಯಾಮವನ್ನು ಶೋಧಿಸುವ ವಿಶಿಷ್ಟ ಯತ್ನಮಾಡುತ್ತಾರೆ.

ಅಕ್ಕಮಹಾದೇವಿಯ ವಚನಗಳನ್ನು ಪ್ರಧಾನ ಆಕರವಾಗಿ ಬಳಸಿಕೊಂಡು, ಆಕೆಯನ್ನು ಕುರಿತಂತೆ ಬೇರೆಯವರು ಒದಗಿಸುವ ಎಲ್ಲ ಮಾಹಿತಿಗಳನ್ನೂ ತಲಸ್ಪರ್ಶಿಯಾಗಿ ವಿಶ್ಲೇಷಿಸುತ್ತಾ ವೀಣಾ ಅವರು ಹಲವಾರು ಸ್ವೋಪಜ್ಞ ಊಹೆಗಳನ್ನು ಆಧಾರಸಮೇತವಾಗಿ ಮುಂದಿಡುತ್ತಾರೆ. ಈ ರೀತಿಯಾಗಿ ಸಂಶೋಧನಾ ಬರಹಕ್ಕೆ ಅವಶ್ಯಕವಾದ ಪರಾಮರ್ಶೆ, ವಸ್ತುನಿಷ್ಠೆ ಮತ್ತು ಪ್ರಾಮಾಣಿಕ ಅಭಿವ್ಯಕ್ತಿಯನ್ನು ಹೊಂದಿರುವ ಅಚ್ಚುಕಟ್ಟಾದ ಕೃತಿ ಇದಾಗಿದೆ. ವೀಣಾ ಅವರ ವಿಚಾರಗಳೂ ಅವರ ಭಾಷೆಯೂ ಎಷ್ಟು ನೇರ ಮತ್ತು ತೀಕ್ಷ್ಣವಾಗಿವೆ ಎಂದರೆ ಕತ್ತಿಯಲಗಿನ ಹಾಗೆ ಅವು ನಮ್ಮ ಮರ್ಮವನ್ನು ತಲುಪಬಲ್ಲವು.

ಈ ಕೃತಿಯಲ್ಲಿ ನಾನು ಗಮನಿಸಿದ ಕೆಲವು ಹೊಸ ಹೊಳಹುಗಳನ್ನು ಇಲ್ಲಿ ಹೇಳಬಹುದು; ಮೊದಲಿಗೆ 'ಅಕ್ಕಮಹಾದೇವಿ' ಎಂಬ ಹೆಸರೇ ವಿವಾದಾಸ್ಪದ ಎಂಬುದರತ್ತ ವೀಣಾ ಗಮನ ಸೆಳೆಯುತ್ತಾರೆ. ವೀರಶೈವ ಧಾರ್ಮಿಕ ವಲಯಕ್ಕೆ ಅಕ್ಕನ ಸೇರ್ಪಡೆಯಾದ ಮೇಲೆ ಮಹಾದೇವಿಯಾದ ಪಾರ್ವತಿಯ ಅಂಶಾವತಾರ ಈಕೆ ಎಂಬ ಪುರಾಣದ ಪ್ರಭಾವಳಿ ಕಟ್ಟಲ್ಪಟ್ಟಿರಬೇಕು. ಹೀಗೆ 'ಮಹಾದೇವಿ' ಎಂಬುದು ಒಂದು Construction ಆಗಿರುವುದು ಸಾಧ್ಯ ಎಂಬುದಕ್ಕೆ ಪೂರಕವಾಗಿ ಈ ನಿಟ್ಟಿನಲ್ಲಿ ಪೂರ್ವ ವಿದ್ವಾಂಸರ ಪ್ರತಿಪಾದನೆಯನ್ನು ಪರೀಕ್ಷಿಸುತ್ತಾರೆ. ಉಡುತಡಿಯಲ್ಲಿ ದೊರೆತಿರುವ ಬೆತ್ತಲು ಹೆಣ್ಣಿನ ಪ್ರತಿಮೆಯನ್ನು ಅಕ್ಕಮಹಾದೇವಿಯೆಂದೇ ಪರಂಪರೆಯಿಂದ ನಂಬಲಾಗುತ್ತದೆ. ಈ ಪ್ರತಿಮೆಯ ಬುಡದಲ್ಲಿ 'ಕಮಲ-ಗಂಗವ್ವಾ' ಎಂಬ ಹೆಸರನ್ನು ಕೆತ್ತಲಾಗಿದೆ. ಸಂಸ್ಕೃತದಲ್ಲಿರುವ ಗಣ ಸಹಸ್ರನಾಮಾವಳಿ ಗ್ರಂಥದಲ್ಲಿ ಅಕ್ಕನ ಬಗೆಗಿನ ಹೆಸರನ್ನು ಉಲ್ಲೇಖಿಸುವಾಗ 'ಮಹಾದೇವಿ ತಥೈವ ಕಮಲವ್ವಾ' ಎಂಬ ಉಲ್ಲೇಖವಿದೆ. ಈ ಎರಡೂ ಅಂಶಗಳನ್ನು ಗುರುತಿಸಿದರೂ ಡಾ॥ ಆರ್.ಸಿ.ಹೀರೇಮಠರು ಈ ಶೋಧನೆಯನ್ನು ಮುಂದುವರಿಸದೆ ಹೋದರು. ಅಕ್ಕಮಹಾದೇವಿಯ ಹೆಸರನ್ನು ಕುರಿತ ವಿವಾದದ ಬಗ್ಗೆಯೇ ಲೇಖನ ಬರೆದಿರುವ ಡಾ॥ ಎಂ. ಚಿದಾನಂದಮೂರ್ತಿಯವರೂ 'ಮಹಾದೇವಿ' ಪಾರ್ವತಿಯ ಹೆಸರು. ಆದ್ದರಿಂದ ಅಕ್ಕಮಹಾದೇವಿ ಎಂಬ ಹೆಸರೇ ಸರಿ ಎಂದು ಅದನ್ನೇ ಸಮರ್ಥಿಸಿರುತ್ತಾರೆ–ಈ ಇಬ್ಬರು ಹಿರಿಯ ವಿದ್ವಾಂಸರೂ 'Religious appropriation' ಎಂಬುದನ್ನು ಗಂಭೀರವಾಗಿ ಪರಿಗಣಿಸದೆ ಬಿಟ್ಟಿರಬಹುದಾದರೂ ವೀಣಾ ಈ ಸೂಕ್ಷ್ಮವನ್ನು ಬೆಳಕಿಗೆ ತರುತ್ತಾರೆ.

> *"ಎಲ್ಲ ಕಟ್ಟುಪಾಡು ಮುಖವಾಡವನ್ನು ಕಳಚಿಕೊಂಡು ಸಮಾನ ಸ್ಥಿತಿಯಲ್ಲಿ, ಸಮಾನ ನೆಲೆಯಲ್ಲಿ ಸಂವಹನ ಸಾಧ್ಯವಾಗದೆ ಇರುವ ಅಕ್ಕಳಿಗೆ ಅಂಥ ಸಮಾನ ಸ್ಥಿತಿಯ, ಸಮಾನ ನೆಲೆಯ, ಸಮಾನ ಅವಸ್ಥೆಯ, ಪರಿಪೂರ್ಣ ಸಂವಹನ ಸಾಧ್ಯವಾಗುವುದು ಚೆನ್ನಮಲ್ಲಿಕಾರ್ಜುನನ ಜೊತೆಗೆ ಮಾತ್ರ. ಆತ ಒಬ್ಬ ಕಾಲ್ಪನಿಕ ಪುರುಷ ಎಂಬುದು ಮಹತ್ವದ ಅಂಶ. ಆ ಕಾರಣಕ್ಕಾಗಿ ಆತ ಅಸ್ತಿತ್ವದಲ್ಲೇ ಇಲ್ಲ. ಅಕ್ಕಳ ದೈಹಿಕ ಮತ್ತು ಬೌದ್ಧಿಕ ಸಂವಹನಕ್ಕೆ ಇಂತಹ ಕಾಣದ ವ್ಯಕ್ತಿ ಚೆನ್ನಮಲ್ಲಿಕಾರ್ಜುನನನ್ನು ಒಬ್ಬ ಪರಿಪೂರ್ಣ ನೆಲೆಯಲ್ಲಿ ಒದಗಿದ ತಂತ್ರಮಾತ್ರವಾಗುತ್ತಾನೆ"*

ಅಕ್ಕಮಹಾದೇವಿಯ ಹೆಸರು ಮಾತ್ರವಲ್ಲ, ಅವಳ ತಂದೆ ತಾಯಿಯರನ್ನು ನಿರ್ಮಲ, ಸುಮತಿ ಎಂದು ಪುರಾಣಕಾರರು ಹೆಸರಿಸಿರುವುದೂ ಹನ್ನೆರಡನೆಯ ಶತಮಾನದಲ್ಲಿ ಕನ್ನಡಿಗ ಶಿವಭಕ್ತನು ಇಟ್ಟುಕೊಳ್ಳುವ ಮಾದರಿಯ ಹೆಸರುಗಳಂತೆ ಇಲ್ಲವೇ ಇಲ್ಲ. ಹಾಗಾಗಿ ಅಕ್ಕನ ಜನ್ಮಸಂಬಂಧದ ವೃತ್ತಾಂತವೇ ಮೇಲೆ ಹೇಳಿದ ಧಾರ್ಮಿಕ ತಿದ್ದುಪಡಿಗೆ ಒಳಗಾಗಿದ್ದರೆ ಅಚ್ಚರಿಯಿಲ್ಲ. ಹೆಸರಿನ ಸಂಬಂಧವಾಗಿ ನಡೆದಿರಬಹುದಾದ ಈ ತಿದ್ದುವಿಕೆಗೂ ಶೈವಪಂಥದ ಕವಿಗಳೂ ಪಂಡಿತರೂ ಆಕೆಯನ್ನು ಪಾರ್ವತೀದೇವಿಯ ಅಂಶಾವತಾರವೆಂದು ಬಣ್ಣಿಸುತ್ತಾ ಬಂದಿರುವುದಕ್ಕೂ ಸಂಬಂಧವಿದೆ. ಒಬ್ಬ ಅವತಾರೀ ಮಹಿಳೆ ಆಕೆ ಎಂದ ಮೇಲೆ ಆ ದೇವತೆಯ ವ್ಯಕ್ತಿತ್ವಕ್ಕೆ ಹೊಂದಿಸಲೆಂದು ಅವಳಲ್ಲಿ ಬಾಲ್ಯದಿಂದಲೇ ಶಿವಾನುರಕ್ತಿ ಬೆಳೆದಿತ್ತೆಂದು ಹೇಳುವುದೂ ಅಗತ್ಯವೆಂದು ಕಂಡಿರಬೇಕು. ಕಸಪಯ್ಯನೋ ಅಥವಾ ಕೌಶಿಕನೋ, ಅಂಥ ಒಬ್ಬ ಅರಸನ ಪ್ರಭುತ್ವದ ದುರ್ಬಳಕೆಯಿಂದ ಜಿಗುಪ್ಸೆಗೊಂಡಾಕೆ ಅಕ್ಕಮಹಾದೇವಿ. ತನಗೆ ಇಷ್ಟವಿಲ್ಲದವನೊಂದಿಗೆ, ಬೇಕಿಲ್ಲದ ವಿವಾಹ ಬಂಧನಕ್ಕೆ ಒಳಗಾದದ್ದು ಅಸಹನೀಯವಾದ ಅನುಭವವನ್ನೇ ಆಕೆಗೆ ನೀಡಿದ್ದಿರಬೇಕು. ಆದರೆ ಈ ನಿಟ್ಟಿನ ಅವಳ ಬದುಕಿನ ವಾಸ್ತವ ವಿವರಗಳು ಧಾರ್ಮಿಕ ಮುಸುಕಿನಲ್ಲಿ ಮರೆಯಾಗಿಬಿಟ್ಟಿವೆ. ಆ ಮುಸುಕನ್ನು ಸರಿಸಿ ನೋಡಲು ಆ ಪರಂಪರೆಯಲ್ಲಿ ನಿಷ್ಠೆಯಿಟ್ಟಿದ್ದ ಕವಿಗಳಿಗಷ್ಟೇ ಅಲ್ಲ, ಕಳೆದ ಶತಮಾನದ ತುಂಬ ಅಕ್ಕನ ಬಗ್ಗೆ ಜಿಜ್ಞಾಸೆ ಮಾಡಿರುವ ಅನೇಕ ಆಧುನಿಕ ವಿದ್ವಾಂಸರಿಗೂ ಧೈರ್ಯ, ಹಾಗೂ ಮನಸ್ಸು ಬರಲಿಲ್ಲ. ಹೀಗಾಗಿ ಶೈವಕವಿಗಳು, ಪುರಾಣಕಾರರು ಕಾಲಕಾಲಕ್ಕೆ ಅಕ್ಕನ ಚರಿತ್ರೆಯನ್ನು ಮತ್ತೆ ಮತ್ತೆ ರಚಿಸಿದರಾದರೂ ಆಯಾ ಕಾಲದ ಧಾರ್ಮಿಕ-ಸಾಮಾಜಿಕ ನೆಲೆಗಳಲ್ಲಿ ಪುರುಷರ ನಂಬಿಕೆಗಳಿಗೆ ತಕ್ಕಂತೆ ಅಕ್ಕಮಹಾದೇವಿಯ ಚರಿತ್ರೆಯೂ ಪರಿಷ್ಕರಣೆಗೆ ಒಳಗಾಗುತ್ತಾ ಹೋಗಿದೆ. ಹೀಗಾದ್ದರಿಂದ ಹೆಣ್ಣುಮಗಳೊಬ್ಬಳು ಅಷ್ಟು ಹಿಂದೆಯೇ ಪುರುಷಪ್ರಧಾನ ವ್ಯವಸ್ಥೆಯನ್ನು ಎದುರು ಹಾಕಿಕೊಂಡಳೆಂಬ ಅವಳ ಸಾಮಾಜಿಕ ಅಸ್ಮಿತೆಯ ಅಂಶಗಳತ್ತ ಚರಿತ್ರೆಯಲ್ಲಿ ಕೈಬಿಟ್ಟುಹೋಗಿದ್ದು, ಆ ಅಂಶದತ್ತ ಸಂಶೋಧಕರು ಗಮನ ಹರಿಸುವುದು ಇಂದು ಮುಖ್ಯವಾಗುತ್ತದೆ. ವೀಣಾ ಅವರು ಈ ಕೃತಿಯಲ್ಲಿ ಚರ್ಚೆಗೆ ತಂದಿರುವ ತುಂಬ ಮಹತ್ವದ್ದೆನಿಸುವ ಒಂದು ಅಂಶ ಅಕ್ಕನ ವಚನಗಳಲ್ಲಿ ಹುದುಗಿರುವ ಅವಳ 'ಅನುಭಾವ'ಕ್ಕೂ ಮೀರಿದ ವೈಯಕ್ತಿಕ ಅನುಭವವನ್ನು ಕುರಿತದ್ದಾಗಿದೆ. ಬೇಡವಾಗಿದ್ದ ಮದುವೆಯ ಸಂಬಂಧದಿಂದ ಆಕೆ ಅನುಭವಿಸಿದ ನೋವು ಅವಳೊಳಗೆ ಆಳವಾಗಿ ಕೂತುಬಿಟ್ಟಿದೆ. ಅನೇಕ ವಚನಗಳಲ್ಲಿ ತನ್ನ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನನಿಗೆ ಆರ್ತವಾಗಿ ಮೊರೆಯಿಡುವ ರೀತಿಯಲ್ಲೋ ಅಥವಾ ಸಮಾಜದ ಪುರುಷ ದೃಷ್ಟಿಯು ಹೆಣ್ಣನ್ನು ಬರೀ ಶರೀರವೆಂದು ಕಂಡು ಮುಗಿಬಿದ್ದು ಕಾಡುವುದನ್ನು ತಿರಸ್ಕರಿಸುವಂಥ ನುಡಿಗಳಲ್ಲಿಯೋ ಅಕ್ಕನ ಮನದಾಳದ ಆ ನೋವು ಮತ್ತೆ ಮತ್ತೆ ಪ್ರಕಟವಾಗಿದೆ.

ಲೋಕದ ಕುಟುಂಬ-ಮದುವೆ-ಸಂಸಾರಗಳು ತಂದ ಅನುಭವ ಅಸಹನೀಯವಾದ್ದರಿಂದಲೇ ಬಹುಶಃ ಅವಳು ಅದನ್ನು ತೊರೆದು ವಿರಾಗಿಣಿಯಾಗಿ ಹೊರಟಳು. ಆ ವಿರಕ್ತಿಯನ್ನೇ ಮಧುರಭಕ್ತಿಯನ್ನಾಗಿಸಿಕೊಂಡು ತನ್ನ ಹೆಣ್ತನದ ಸಕಲ ಸಾರ್ಥಕತೆಯನ್ನೂ ಸೂಚಿಸಬಹುದಾದ ಆದರ್ಶಪ್ರಾಯವಾದ ಪ್ರೇಮ, ಆದರ, ಸಮಾನ ಮನೋಭಾವ ಮತ್ತು ನಿರ್ಬಂಧವಿಲ್ಲದಂಥ ಗುಣಗಳಿಂದ ತುಂಬಿದ ಅಲೌಕಿಕ ಪ್ರೇಮಿಯೊಬ್ಬನನ್ನು

ಚೆನ್ನಮಲ್ಲಿಕಾರ್ಜುನನಲ್ಲಿ ಸೃಷ್ಟಿಸಿರಬಹುದು ಎಂಬ ಸಾಧ್ಯತೆಯತ್ತ ವೀಣಾ ನಮ್ಮ ಗಮನ ಸೆಳೆಯುತ್ತಾರೆ.

ಐಹಿಕ-ಪಾರಮಾರ್ಥಿಕ-ಎರಡನ್ನೂ ಸಮಾನವಾಗಿ ನಿಭಾಯಿಸಬೇಕು ಎನ್ನುವುದು ವೀರಶೈವ ಧರ್ಮದ ನಂಬಿಕೆಯಾಗಿದೆ. ಆದರೆ ಅಕ್ಕನಿಗೆ ಐಹಿಕ ಬದುಕು ಅಸಹನೀಯವಾಗಿದ್ದು, ಪಾರಮಾರ್ಥಿಕತೆಯೇ ಅವಳಿಗೆ ಉಳಿದಿದ್ದ ದಾರಿ, ಹೀಗಾಗಿದ್ದಕ್ಕೆ ಹುಟ್ಟಿನಿಂದಲೇ ಅವಳಲ್ಲಿ ಬಂದಿತ್ತೆನ್ನಲಾದ ವಿರಕ್ತಿಯೇ ಕಾರಣವಾಗಿರಲಾರದು. ಅದಕ್ಕಿಂತ ಹೆಚ್ಚಾದ ತೊಳಲಾಟಕ್ಕೆ ಆಕೆ ಒಳಗಾಗಿದ್ದು ಹೆಜ್ಜೆ ಹೆಜ್ಜೆಗೂ ಅದನ್ನು ಮೀರುವ ಯತ್ನಮಾಡಿದ್ದಾಳೆ. ತನ್ನ ಆ ಅಂತರಂಗದ ಹೋರಾಟಕ್ಕೆ, ಆ ಅನುಭವವನ್ನು ವ್ಯಕ್ತಪಡಿಸುವುದಕ್ಕೆ ವಚನವನ್ನು ಮಾಧ್ಯಮವನ್ನಾಗಿ ಆಕೆ ಮಾಡಿಕೊಂಡಿದ್ದಾಳೆ ಎನ್ನುವುದು ವೀಣಾ ಅವರು ತಲುಪುವ ತೀರ್ಮಾನಗಳಲ್ಲಿ ಒಂದಾಗಿದೆ.

ಅನೇಕ ವಿದ್ವಾಂಸರು ಸೂಚಿಸುವಂತೆ ಶಿವಶರಣರು ಪ್ರತಿಪಾದಿಸಿದ 'ಶರಣಸತಿ-ಲಿಂಗಪತಿ' ತತ್ವವು ಹೆಣ್ಣಾದ್ದರಿಂದ ಅಕ್ಕನಿಗೆ ಪೂರಕವಾಗಿ ಒದಗಿದ್ದು ತನ್ನನ್ನ ಶಿವನ ಸತಿಯಾಗಿ, ಪ್ರಿಯತಮೆಯಾಗಿ ಭಾವಿಸಿಕೊಳ್ಳಲು ಅನುಕೂಲಕರ ಆಗಿದ್ದರೂ ಆ ಚೌಕಟ್ಟಿನ ಆಚೆಗಿನ ಅವಳ ವ್ಯಕ್ತಿತ್ವದ ಆಳದ ಹೊಯ್ದಾಟದ ತಾತ್ವಿಕವೂ ಕಾವ್ಯಾತ್ಮಕವೂ ಆದ ಅಭಿವ್ಯಕ್ತಿಗೂ ಅಕ್ಕಮಹಾದೇವಿ ಯತ್ನಿಸಿದ್ದಾಳೆ ಎಂಬುದನ್ನು ಸಶಕ್ತವಾಗಿ ವೀಣಾ ಗುರುತಿಸಿ ಕೊಡುತ್ತಾರೆ.

ಅಕ್ಕಮಹಾದೇವಿಯ ವಚನಗಳು ಗುಪ್ತ ಸಾಧಕರೆಲ್ಲ ಹಿಂದಿನಿಂದ ಮಾಡುತ್ತ ಬಂದಿರುವ ಹಾಗೆ 'ಸಂಧಾಭಾಷೆ'ಯನ್ನು ಒಳಗೊಂಡಿದ್ದು, ಅವು ಯಾವಾಗಲೂ ಒಂದಕ್ಕಿಂತ ಹೆಚ್ಚು ಅರ್ಥದ ಪಾತಳಿಗಳನ್ನು ಹೊಂದಿರುತ್ತವೆ. ಅಕ್ಕನ 'ಮಧುರಭಕ್ತಿ'ಯದು ಎಂದು ಗುರುತಿಸಲಾಗುವ ವಚನಗಳಲ್ಲಿ ಆಕೆ ಧಾರಾಳವಾಗಿ ಲೈಂಗಿಕ ಪಾತಳಿಯ ಅರ್ಥವನ್ನು ಹೊಮ್ಮಿಸುವಂಥ ಭಾಷೆ, ರೂಪಕಗಳನ್ನು ಬಳಸುತ್ತಾ ನಿರಂತರವಾಗಿ ಉನ್ನತ ಪ್ರೇಮಕ್ಕಾಗಿ ಹಾತೊರೆಯುವ, ಅದು ದೊರಕದ್ದರಿಂದ ತೀವ್ರ ಹತಾಶಳಾಗುವ ಹೆಣ್ಣಿನ ಮನೋದೈಹಿಕ ಅನುಭವಕ್ಕೆ ಉತ್ಕಟವಾದ, ಭಾವತೀವ್ರತೆಯಿಂದ ಅಭಿವ್ಯಕ್ತಿ ನೀಡುತ್ತಾಳೆ. ಹೀಗಾಗಿರುವುದು ಆಕಸ್ಮಿಕವಲ್ಲ; ಅಕ್ಕನ ಸ್ವಂತದ ಅನುಭವವೇ ಹಾಗೆ ಅನುಭಾವದೊಳಗೂ ಬೆರೆತು ಹೊಮ್ಮಿ ಬಂದಿರಬಹುದು ಎಂಬುದನ್ನು ಅನೇಕ ವಚನಗಳ ಉದಾಹರಣೆ ಮುಖಾಂತರವಾಗಿ ತೋರಿಸಿಕೊಡುತ್ತಾರೆ ವೀಣಾ.

ಶಿವಶರಣೆಯೊಬ್ಬಳೊಳಗೆ ಹುದುಗಿದ ಅಸಾಧಾರಣ ಸಂವೇದನಾಶೀಲ ಸ್ತ್ರೀಯೊಬ್ಬಳ ದ್ವಂದ್ವವನ್ನು ಗುರುತಿಸುವಲ್ಲಿ ವೀಣಾ ನಿಸ್ಸಂದಿಗ್ಧವಾದ ಮೊನಚಾದ ತರ್ಕಶಕ್ತಿಯನ್ನು ಬಳಸಿರುವುದು ತುಂಬ ಗಮನಾರ್ಹವಾಗಿದೆ. ಏಕೆಂದರೆ ಧಾರ್ಮಿಕ ವಲಯಗಳಿಗೆ ಸಂಬಂಧಿಸಿದ ಚಾರಿತ್ರಿಕ ವ್ಯಕ್ತಿಗಳಲ್ಲಿ ಮಾನವ ಸಹಜ ಸಂಭಾವ್ಯವನ್ನು ಹೇಳಲು ಯತ್ನಿಸುವುದೇ ದೊಡ್ಡ ಅಪಾಯದ ಸಂಗತಿ ಆಗುವ ಇಂದಿನ ದಿನಗಳಲ್ಲಿ ಬಹುಬೇಗ ಧಾರ್ಮಿಕ ಅಸಹಿಷ್ಣುತೆಯ ಹಣೆಪಟ್ಟಿಗಳೂ ಗೊಂದಲಗಳೂ, ಅಂಥ ಗ್ರಂಥಗಳ ಬಹಿಷ್ಕಾರ ಅಥವಾ ವಿನಾಶದ ಯತ್ನಗಳೂ ಸಹಜವಾಗಿಬಿಟ್ಟಿವೆ. ಇಂಥ ಪರಿಸರದಲ್ಲೂ ವೀಣಾ ತಮ್ಮ ಅಸ್ಖಲಿತವಾದ ಪ್ರಾಮಾಣಿಕ ಬರಹಕ್ಕಾಗಿ, ದೃಢವಾದ, ದಿಟ್ಟವಾದ ನಿರ್ಭಿಡೆಯ ವಿಮರ್ಶೆಗಾಗಿ 'ಕಾವ್ಯಾನಂದ' ಪ್ರಶಸ್ತಿ ಭಾಜನರಾಗಿರುವುದು ನಿಜಕ್ಕೂ ಅಭಿನಂದನಾರ್ಹ.

ಈ ಕೃತಿಯಲ್ಲಿ ವೀಣಾ ಮಾಡಿರುವ ಹಲವು ವಿಶ್ಲೇಷಣೆಗಳು ಹೊಸ ಹೊಳಹನ್ನು ನೀಡಿ ಅಕ್ಕಮಹಾದೇವಿಯನ್ನು ಅರ್ಥೈಸಿಕೊಳ್ಳುವಲ್ಲಿ ಕನ್ನಡಿಗರ ತಿಳಿವಳಿಕೆಯನ್ನು ವಿಸ್ತರಿಸುತ್ತವೆ. ಆದ್ದರಿಂದ ಈ ಕೃತಿ ವಿಶಿಷ್ಟವಾದದ್ದು. ಅಕ್ಕನ ಚರಿತ್ರೆಗೆ ಸಂಬಂಧಿಸಿದಂತೆ ಯಾವತ್ತೂ ಚರ್ಚೆಗೆ ವಸ್ತುವಾಗಿ ಕ್ಲೀಷೆಗಳಾಗಿ ಬಿಟ್ಟಿರುವ ಅವಳ ದಿಗಂಬರತ್ವ, ವಿವಾಹ, ಕೇಶಾಂಬರತ್ವ

> ***"ಲೌಕಿಕ ಅಸಹನೀಯವಾದಾಗ ಅಲೌಕಿಕ ಪ್ರಿಯವಾಗುತ್ತದೆ. ಹಾಗೆಯೇ ಲೌಕಿಕದ ವ್ಯಕ್ತಿ, ಅವನ ಸಂಬಂಧ ಅಸಹನೀಯವಾದಾಗ ಅಲೌಕಿಕ ವ್ಯಕ್ತಿ ಹೆಚ್ಚು ಪ್ರಿಯನಾಗುತ್ತಾನೆ. ಇವೆರಡರಲ್ಲಿ ಯಾವುದೋ ಅಲೌಕಿಕ ಇಲ್ಲವೆ ಧಾರ್ಮಿಕ ಚೌಕಟ್ಟಿನಲ್ಲಷ್ಟೆ ಅರ್ಥ ಹುಡುಕುವುದು ಅಸಹಜತೆಗೆ ಎಡೆಗೊಡುತ್ತದೆ. ಆದ್ದರಿಂದ ಲೌಕಿಕದ ಅಪರಿಪೂರ್ಣತೆಗಾಗಿ ಪೂರ್ಣತೆಯ ಹುಡುಕಾಟವಾಗಿ ಅಲೌಕಿಕ ಅದರದೇ ಒಂದು ವಿಸ್ತರಣೆ" ಆಗಿರುತ್ತದೆ.***

ಮತ್ತು ಕಿನ್ನರಿ ಬ್ರಹ್ಮಯ್ಯನ ಪ್ರಸಂಗಗಳನ್ನು ಸಾಕಷ್ಟು ತೀಕ್ಷ್ಣವಾಗಿ ವಿಮರ್ಶೆಗೆ ಒಳಗುಮಾಡುವ ವೀಣಾ ಅಂಥ ಕಲ್ಪನೆಗಳು ಎಷ್ಟು ಅಸಂಭಾವ್ಯ ಎಂಬುದನ್ನು ತೋರಿಸಿಕೊಡುತ್ತಾರೆ. ಕಿನ್ನರಿ ಬ್ರಹ್ಮಯ್ಯ ತಾನಾಗಿ ಬಂದು ಅಕ್ಕನನ್ನು ತಡವಿದ ನೆಂದಾದರೆ ಅದು ಗಂಡು ಸಮಾಜದಲ್ಲಿ ಹೆಣ್ಣಿಗೆ ಕಾಡುವ ಅನಿವಾರ್ಯ ಸಮಸ್ಯೆ; ಒಂದು ವೇಳೆ ಅಲ್ಲಮಾದಿಗಳು ಅಕ್ಕನನ್ನು ಪರೀಕ್ಷಿಸಲಿಕ್ಕೆ ಆತನನ್ನು ಕಳುಹಿಸಿದರು ಎಂದಾದರೆ ಅನುಭವ ಮಂಟಪದ ಶರಣರು, ಹೆಂಗಸಿನ ಸಮಾನತೆ ಎತ್ತಿ ಹೇಳಿದವರು, ಇಂತಹ ಅತ್ಯಂತ ವಿಕೃತ ತಪಾಸಣೆಯ ವ್ಯವಸ್ಥೆ ಮಾಡಿ ಸ್ತ್ರೀಯರ ಪ್ರವೇಶಕ್ಕೆ ಅನುಮತಿ ನೀಡುತ್ತಿದ್ದರೇ ಎಂಬ ಪ್ರಶ್ನೆ ಏಳುತ್ತದೆ. ಇದು ನಿಜವೆಂದಾದರೆ ಅವರ ಇಡೀ ತತ್ವವೇ ಪ್ರಶ್ನಾರ್ಹ ವಾಗುವುದಿಲ್ಲವೆ? ಎಂದು, ಇಂಥ ಕಲ್ಪನೆಗಳು ಅಕ್ಕಮಹಾದೇವಿಯ ಸಾಧನೆಯ ಗರಿಮೆಯನ್ನು ತೋರಿಸಲೆಂದೇ ಆರಾಧಕರಿಂದ ಹುಟ್ಟಿಬಂದಿರ ಬಹುದಾದರೂ ಅವು ಅವೈಚಾರಿಕವಾಗಿ ಅಪಾಯಕಾರಿಯೂ ಆಗಿರುವುದ ರತ್ತ ಎಚ್ಚರಿಸುತ್ತಾರೆ ಈ ಲೇಖಕಿ.

ಒಟ್ಟಾರೆಯಾಗಿ ನೋಡಿದರೆ ಅಕ್ಕಮಹಾದೇವಿಯ ಬದುಕಿನಲ್ಲೂ, ವ್ಯಕ್ತಿತ್ವದಲ್ಲೂ, ಆಕೆಯ ಅಭಿವ್ಯಕ್ತಿ ರೂಪವಾದ ವಚನಗಳಲ್ಲಿಯೂ ದ್ವಿತ್ವದ ಅಂಶಗಳಿರುವುದನ್ನೂ ಕ್ರಮವಾಗಿ, ತರ್ಕಬದ್ಧವಾಗಿ ವೀಣಾ ಗುರುತಿಸುವು ದನ್ನು ಕಾಣುತ್ತೇವೆ. ಇಹ-ಪರ; ಐಹಿಕ-ಪಾರ ಲೌಕಿಕ; ಲೌಕಿಕ-ಅಲೌಕಿಕ; ದೈಹಿಕ-ದೇಹಾತೀತ ನೆಲೆಗಳ ನಿರಂತರವಾದ ಆಕರ್ಷಣೆ-ಅಪಕರ್ಷಣೆಗಳು ಇರುವುದನ್ನು ಹೇಳಲು 'ದ್ವೈತ' ಎಂಬ ಶಬ್ದವನ್ನು ಶೀರ್ಷಿಕೆಗಾಗಿ ವೀಣಾ ಆರಿಸಿಕೊಂಡಿರಬಹುದು.

ಈ ಕೃತಿಯನ್ನು ಬರೆದ ಕಾಲಕ್ಕೆ ವೀಣಾ ಬಲವಾದ ಸ್ತ್ರೀವಾದಿ ನಂಬಿಕೆಗಳನ್ನು ಹೊಂದಿದ್ದವರು. ಆಮೇಲೆ ಅವರ ಬದುಕನ್ನೂ, ಜೀವನದ ಬಗೆಗಿನ ತಾತ್ವಿಕ ನಂಬಿಕೆಯನ್ನೂ ಅವರು ಬದಲಾಯಿಸಿಕೊಂಡಿದ್ದಾರೆ. ಈಗ ಅಕ್ಕಮಹಾದೇವಿ ಹೊರಗಿದ್ದು ಕಾಡುವ ವಿಚಾರವಾಗಿ ಉಳಿದಿರದೆ ಆಕೆಯ ಅಂತರಾಳದ ನಿಜವನ್ನು ಒಳಹೊಕ್ಕು ಗ್ರಹಿಸಬಲ್ಲ ನೆಲೆಯಲ್ಲಿ ವೀಣಾ ಹೊಸ ರೀತಿಯಿಂದ ಅಕ್ಕಮಹಾದೇವಿಯನ್ನು ಕುರಿತು ಹೇಳಬಲ್ಲ ವರೂ ಆಗಿದ್ದಾರೆ. ಈ ಮಾತಿಗೆ ತಮ್ಮ ಕೃತಿಗೆ ಅನುಬಂಧವಾಗಿ ಜೋಡಿಸಿರುವ ಎರಡು ಲೇಖನಗಳಲ್ಲಿ ಅವರು ನಿದರ್ಶನ ನೀಡಿದ್ದಾರೆ. ಈ ಹೊಸ ತಿಳಿವಳಿಕೆಯಲ್ಲಿ ವ್ಯಕ್ತಿಗಳಿಗೆ ಹೆಣ್ಣು-ಗಂಡುತನಗಳಿಗೆ ಮೀರಿದ, ನಪುಂಸಕವೂ ಅಲ್ಲದಿರುವ 'ತುರೀಯ' ಅಥವಾ ನಾಲ್ಕನೆಯ ಅವಸ್ಥೆಯೂ ಇರಬಲ್ಲದೆಂದೂ, ಆ ನೆಲೆಯನ್ನು ತಲುಪಿದ್ದಾಕೆ ಅಕ್ಕಮಹಾದೇವಿ ಎಂದೂ ಅವರು ಗುರುತಿಸುತ್ತಾರೆ. ಈ ಹೊಸ ನಿಟ್ಟಿನಿಂದ ಅಕ್ಕನ ವಚನಗಳ ಅರ್ಥವೂ ಭಿನ್ನವಾಗಿ ಕಾಣಬಲ್ಲದೆಂಬುದನ್ನು ತೋರಿಸಿಕೊಡುತ್ತಾರೆ. ಸ್ತ್ರೀವಾದಿತ್ವದಿಂದ ಲಿಂಗಾತೀತತ್ವದ ಕಡೆಗೆ ಸಾಗುವ ಈ ಕೃತಿ ಪ್ರಾರಂಭದಲ್ಲಿ ಹೇಳಿದಂತೆ ವೀಣಾ ಅವರದೇ ವ್ಯಕ್ತಿತ್ವದ ಪಯಣದ ಗತಿಗೂ ದಿಕ್ಸೂಚಿಯಾಗಿರುವ ತುಂಬು ಪ್ರಾಮಾಣಿಕ ಕಥನ, ಸಂಕಥನ......ಇತ್ಯಾದಿ.

❑



ಮಣಿಪುರದ ಮಹಿಳೆಯರ ವಿಶಿಷ್ಟ ಪ್ರತಿಭಟನೆ

■ *ರಾಜೇಶ್ವರಿ*

ಅಂದು ಸಾಂಪ್ರದಾಯಿಕ ಭಾರತೀಯ ಮನಸ್ಸುಗಳಿಗೆ ಶಾಕ್ ಕೊಟ್ಟ ದಿನ. ಮಣಿಪುರದ ಕಂಗ್ಲಾಪೋರ್ಟನ ಮುಂಭಾಗದಲ್ಲಿದ್ದ ಅಸ್ಸಾಂ ಹೆಡ್ ಕ್ವಾರ್ಟರ್ಸ್‌ನ ಕಛೇರಿಯ ಗೇಟ್ ಮುಂದೆ ಹನ್ನೆರಡು ಮಹಿಳೆಯರು ಸಾಲಾಗಿ ನಿಂತು ಘೋಷಣೆಯನ್ನು ಕೂಗುತ್ತಿದ್ದರು. ಅವರಲ್ಲಿ ಆಕ್ರೋಶ, ಸಿಟ್ಟು, ರೋಷ ತುಂಬಿ ತುಳುಕುತ್ತಿತ್ತು. ಅವರ ಕೈಯಲ್ಲಿದ್ದ ಬ್ಯಾನರ್‌ನಲ್ಲಿ "ಇಂಡಿಯನ್ ಆರ್ಮಿಯವರೆ ನಮ್ಮನ್ನೂ ರೇಪ್ ಮಾಡಿ" ಎಂಬ ಪ್ರತಿಭಟನಾ ಘೋಷಣೆಯನ್ನು ಬರೆಯಲಾಗಿತ್ತು. ಈ ಹನ್ನೆರಡು ಮಹಿಳೆಯರು 45ರಿಂದ 60ವರ್ಷ ವಯಸ್ಸಿನ ಆಜುಬಾಜಿನವರು. 32 ವರ್ಷದ ತಂಗಮ್ ಮನೋರಮಾಳ ಮೇಲೆ ಅತ್ಯಾಚಾರ ನಡೆಸಿ, ಕೊಲೆಗೈದ ಸೈನಿಕರ ವಿರುದ್ಧ ಪ್ರತಿಭಟಿಸಲು ಈ ಮಹಿಳೆಯರು ಬೆತ್ತಲೆಯಾಗಿ ನಿಂತಿದ್ದರು.

ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಜ್ಞಾನೇಶ್ವರಿಯು ಜ್ಞಾನಪ್ರಿಯ ಮಹಿಳಾ ಕಾಲೇಜಿನಲ್ಲಿ ಪದವಿಯನ್ನು ಪಡೆದವಳು. ವಿದ್ಯಾರ್ಥಿ ದೆಸೆಯಲ್ಲಿಯೇ ಆಕೆ ರಾಜಕೀಯ ಹೋರಾಟಗಳನ್ನು ನಡೆಸುತ್ತಿದ್ದವಳು. ಮದುವೆಯಾದ ಮೇಲೆ ನಾಲ್ಕು ಮಕ್ಕಳ ಪಾಲನೆ, ಪೋಷಣೆಯ ದೃಷ್ಟಿಯಿಂದ ಅವಳ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕಾಯಿತು. ಕೌಟುಂಬಿಕ ಜವಾಬ್ದಾರಿಗಳ ನಡುವೆ ಬಿಡುವು ಮಾಡಿಕೊಳ್ಳುತ್ತಿದ್ದ ಜ್ಞಾನೇಶ್ವರಿ ತಾಯಂದಿರ ಸಂಘಟನೆಯಿಂದ ಮೈತ್ರಾ ಫೈಯಫಿಯ ಸ್ಥಳೀಯ ಶಾಖೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿಕೊಳ್ಳುತ್ತಿದ್ದಳು. ಮೈತ್ರಾ ಫೈಯಫಿ ಮಹಿಳಾ ಮಾನವೀಯ ಹಕ್ಕುಗಳಿಗಾಗಿ ರಚಿತವಾದ ಜನಪ್ರಿಯ ಜನಬೆಂಬಲಿತ ವೇದಿಕೆ.

ಈಶಾನ್ಯ ಪ್ರದೇಶಗಳಲ್ಲಿ ಒಂದಲ್ಲ ಒಂದು ಕಾರಣಕ್ಕೆ ಘರ್ಷಣೆಗಳು ನಡೆಯುತ್ತಲೇ ಇರುತ್ತವೆ. ಮಣಿಪುರದಲ್ಲಿ ರಕ್ಷಣಾ ಪಡೆಗಳು ಜನಸಾಮಾನ್ಯರ ಮೇಲೆ ನಡೆಸುವ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಮೇಲೆ, ಯುವ ಜನಾಂಗದ ಮೇಲೆ ನಡೆಸುವ ದೌರ್ಜನ್ಯ ಜನಜನಿತವಾಗಿದೆ. ಮಣಿಪುರದ ಮಹಿಳೆಯರ ಮೇಲೆ ನಡೆಯುವ ಹಿಂಸೆ ಹಾಗೂ ಮಕ್ಕಳನ್ನು ಕಳೆದುಕೊಂಡ ತಾಯಂದಿರ ವೇದಿಕೆ ತಮ್ಮ ನೋವನ್ನು ವಿಶಿಷ್ಟ ವಿಧಾನದ ಮೂಲಕ ಪ್ರತಿಭಟಿಸಿತ್ತು.


ಈ ಮಹಿಳೆಯರ ಆಕ್ರೋಶ 1958ರಲ್ಲಿ ಜಾರಿಗೆ ಬಂದ ಸ್ಪೆಷಲ್ ಆರ್ಮ್ಡ್ ಫೋರ್ಸ್ ವಿರುದ್ಧವಾಗಿತ್ತು. 1960ರಲ್ಲಿ ಚಾನುರೋಸ್ ಎಂಬ ಬಾಲಕಿಯ ಮೇಲೆ ಈ ಸೈನಿಕರು ಅತ್ಯಾಚಾರವೆಸಗಿದ್ದರು. ಈ ಘಟನೆಯ ನಂತರ ಚಾನು ಆತ್ಮಹತ್ಯೆ ಮಾಡಿಕೊಂಡಿದ್ದಳು. ಇಂತಹ ಘಟನೆಗಳು ಹೆಣ್ಣುಮಕ್ಕಳ ಜೀವನದ ದೈನಂದಿನ ಘಟನೆಗಳಾಗಿದ್ದವು. ಹೆಣ್ಣುಮಕ್ಕಳನ್ನು ಚುಡಾಯಿಸುವುದು, ಲೈಂಗಿಕವಾಗಿ ಹಿಂಸಿಸುವುದು ಸೈನಿಕರ ವೃತ್ತಿಯ ಒಂದು ಭಾಗವೆಂಬಂತಾಗಿತ್ತು. ಗರ್ಭಿಣಿ ಹೆಂಗಸರನ್ನು ಸಹ ಸೈನಿಕರು ಬಿಡುತ್ತಿರಲಿಲ್ಲ. "ಇದು ನಮ್ಮನ್ನು ಆಳವಾಗಿ ಗಾಯಗೊಳಿಸಿತ್ತು. ನಮ್ಮ ಎದೆಯಲ್ಲಿ ತಣ್ಣನೆಯ ನೋವು ಗೂಡು ಕಟ್ಟಿತ್ತು. ನಾವು ಸದಾ ಲೈಂಗಿಕ ಹಿಂಸೆಯ ಭಯದಲ್ಲಿ ಬದುಕಬೇಕಾಗಿತ್ತು," ಎನ್ನುತ್ತಾರೆ ಜ್ಞಾನೇಶ್ವರಿ.

ಮಣಿಪುರದಲ್ಲಿ ಸಾವಿರಾರು ಯುವಕರು, ಯುವತಿಯರು ಇದ್ದಕ್ಕಿದ್ದಂತೆ ಕಾಣೆಯಾಗುತ್ತಾರೆ. ಅವರು ಪುನಃ ವಾಪಸ್ಸು ಬರುವುದೇ ಇಲ್ಲ. ಇಂಡಿಯನ್ ಆರ್ಮಿಯವರು ಇಂತಹ ಯುವತಿಯರನ್ನು ವಿಚಾರಣೆಗಾಗಿ ಕರೆದೊಯ್ಯುತ್ತಾರೆ. ಹೀಗೆ ಮಕ್ಕಳನ್ನು ಕಳೆದುಕೊಂಡ ತಾಯಂದಿರು ಮಕ್ಕಳ ಬರುವಿಕೆಗಾಗಿ ಅರೆಹುಚ್ಚಿಯರಾಗಿ ಜೀವನ ಪೂರ್ತಿ ಕಾಯುತ್ತಿರುತ್ತಾರೆ.

ರಕ್ಷಣಾ ದಳದವರು ತಂಗಜಿಮ್ ಮನೋರಮಾಳನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಆದರೆ ಆಕೆ ವಾಪಸ್ ಬರಲೇಇಲ್ಲ. 2004ರ ಜುಲೈ 11ರಂದು ಆಕೆಯನ್ನು ಬಂಧಿಸಲಾಗಿತ್ತು. ಮರುದಿನ ಆಕೆಯ ಶವವನ್ನು ಆಕೆಯ ಮನೆಯ ಬಳಿ ಎಸೆಯಲಾಗಿತ್ತು. ಆಕೆಯ ದೇಹದ ಮೇಲೆ ಅತ್ಯಾಚಾರವೆಸಗಿದ, ದೈಹಿಕ ಹಿಂಸೆಯ ಗುರುತುಗಳು ಇದ್ದವು. ಆಕೆಯ ಶವವನ್ನು ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಗೆ ತರಲಾಗಿತ್ತು. ಈ ಆಘಾತಕಾರಿ ಸುದ್ದಿ ಮೈತ್ರಾ ಸಂಘಟಕರ ಕಿವಿಗೆ ಬಿತ್ತು. ಇದು ಮಣಿಪುರದ ಮಹಿಳೆಯರ ಪ್ರಶ್ನೆಯಾಗಿತ್ತು. ಸದಸ್ಯರೆಲ್ಲಾ ಸಂಘಟಿತರಾಗಿ ಪ್ರತಿಭಟಿಸಲು ತೀರ್ಮಾನಿಸುವುದು ಅನಿವಾರ್ಯವಾಗಿತ್ತು. ಸ್ಥಳೀಯವಾಗಿ ಕ್ರಿಯಾಶೀಲವಾಗಿದ್ದ 32 ಸಂಘಟನೆಗಳು ಒಗ್ಗೂಡಿ "1958 ವಿಶೇಷ ಸ್ಥಾನವನ್ನು ಪಡೆದಿದ್ದ ಕಾಯಿದೆಯನ್ನು ರದ್ದು ಪಡಿಸಬೇಕೆಂಬ ಹೋರಾಟವನ್ನು ನಡೆಸಿದ್ದರು."

ಆದರೆ ಈ ಪ್ರತಿಭಟನೆ ಮಹಿಳೆಯರಲ್ಲಿನ ಆಕ್ರೋಶವನ್ನು ಕಡಿಮೆ ಮಾಡಲಿಲ್ಲ. ಕರುಳಬಳ್ಳಿಯನ್ನು ಕಳೆದುಕೊಂಡ ತಾಯಂದಿರಲ್ಲಿ ಅತೃಪ್ತಿ ಹೆಡೆಯಾಡುತ್ತಿತ್ತು. ಒಮ್ಮೆ ತಾಯಂದಿರು ಗುಪ್ತ ಸಭೆ ಸೇರಿದ್ದರು. ಈ ಸಭೆಯಲ್ಲಿ ತಮ್ಮ ಪ್ರತಿಭಟನೆಯ ಮಾರ್ಗ, ವಿಧಾನ ಭಿನ್ನವಾಗಿರಬೇಕೆಂದು ದೀರ್ಘವಾಗಿ ಚರ್ಚಿಸಿದರು. "ಪ್ರತಿದಿನ ಲೈಂಗಿಕ ಹಿಂಸೆಗೆ ಒಳಗಾಗುತ್ತ,





ಭಯದಿಂದ, ಹೆದರಿಕೆಯಿಂದ ಬೆತ್ತಲೆಯಾಗಿಯೇ ಬೀದಿಯಲ್ಲಿ ಓಡಾಡುತ್ತಿದ್ದೇವೆ. ನಾವು ಬೆತ್ತಲಾಗಿಯೇ ಏಕೆ ಓಡಾಡಬಾರದು. ನಮ್ಮ ರಕ್ಷಣಾ ಪಡೆಗಳಿಗೆ ಮಾತ್ರವಲ್ಲ, ಇಡೀ ವಿಶ್ವಕ್ಕೆ ಒಂದು ಪಾಠವನ್ನು ಏಕೆ ಕಲಿಸಬಾರದು" ಎಂಬ ಒಮ್ಮತದ ತೀರ್ಮಾನಕ್ಕೆ ಬಂದರು. ಈ ಸಭೆಯಲ್ಲಿ ನೂರು ಜನ ಮಹಿಳೆಯರು ಭಾಗವಹಿಸಿದ್ದರು.

ಅಂದು ಬೆಳಿಗ್ಗೆ 6 ಗಂಟೆಗೆ ಜ್ಞಾನೇಶ್ವರಿ ಮನೆಬಿಟ್ಟಿದ್ದರು. ಮನೆ ಬಿಡುವ ಮೊದಲು ಗಂಡನ ಪಾದಗಳನ್ನು ಮುಟ್ಟಿ ನಮಸ್ಕರಿಸಿದ್ದರು. ಈ ವಿಷಯವನ್ನು ಗಂಡನಿಗೆ ತಿಳಿಸುವ ಸಾಧ್ಯತೆಯೇ ಇರಲಿಲ್ಲ. ಈ ಕೆಲಸ ಅತ್ಯಂತ ಮುಖ್ಯವಾದುದಾಗಿತ್ತು. ಕಂಗ್ಲಾಪೋರ್ಟ್‌ನ ತಲುಪುವ ವೇಳೆಗೆ ಕೇವಲ ಬೆರಳಣಿಕೆಯ ಮಹಿಳೆಯರು ಮಾತ್ರ ಬಂದಿದ್ದರು. ಅವರ ನಿರೀಕ್ಷೆ ತಪ್ಪಾಗಿತ್ತು. ಕೆಲವರು ತಡವಾಗಿ ಬಂದರು. ಬಂದಿದ್ದ ಮಹಿಳೆಯರಿಗೆ ಸಂಖ್ಯೆ ಮುಖ್ಯವಾಗೂ ಇಲ್ಲ. ತಡವಾದರೆ ಮಹಿಳೆಯರನ್ನು ಬಂಧಿಸಿ, ಕರ್ಫ್ಯೂ ಹೇರಬಹುದೆಂಬ ಅನುಮಾನವು ಸಹ ಕಾಡುತ್ತಿತ್ತು. ಗೇಟ್ ಬಳಿ ಹೋಗುತ್ತಿದ್ದ ಹಾಗೆ ಇವರ ಸಂಖ್ಯೆ ಕೇವಲ ಹನ್ನೆರಡಕ್ಕೆ ಇಳಿಯಿತು. ಜ್ಞಾನೇಶ್ವರಿಗೆ ಇದು ಯಾವುದೂ ಕಾಣಿಸಲೇ ಇಲ್ಲ. ಆಕೆ ತನ್ನದೇ ಆದ ಪ್ರಪಂಚದಲ್ಲಿ ಇದ್ದಳು. "ನಮ್ಮ ದೇಹದ ಮಾಂಸವನ್ನು ತೆಗೆದುಕೊಳ್ಳಿ" ಎಂದು ಪ್ರತಿಭಟನೆಯ ಘೋಷಣೆಗಳನ್ನು ಕೂಗುತ್ತಿದ್ದಳು. ಆಕೆಯ ಕಣ್ಮುಂದೆ ಇದ್ದ ಒಂದೇ ಚಿತ್ರ ಅನಾಥವಾಗಿ ಬಿದ್ದಿದ್ದ ಮನೋರಮಾ ಶವ.

ಎದೆಯಲ್ಲಿ ತುಂಬಿದ್ದ ಬೆಂಕಿಯೊಂದಿಗೆ ಈ ತಾಯಂದಿರು ಅಸ್ಸಾಂ ಆರ್ಮಿ ರೈಫಲ್ಸ್ ವಿಭಾಗದ ಪುರುಷರನ್ನು ಭೇಟಿಯಾದರು. ಹಲವಾರು ವರ್ಷಗಳಿಂದ ತುಂಬಿಕೊಂಡಿದ್ದ ಎದೆಯಾಳದ ನೋವು ದುಃಖ ಅಂದು ವ್ಯಕ್ತವಾಯಿತು. ಸಾರ್ವಜನಿಕವಾಗಿ ಎಲ್ಲರೆದುರಿಗೆ ತಮ್ಮ ಮೇಲೆ ಅತ್ಯಾಚಾರವೆಸಗುವಂತೆ ಅಧಿಕಾರಿಗಳಿಗೆ ಸವಾಲೆಸೆದರು. ಸೈನಿಕರು ರಕ್ಷಣೆ ನೀಡಲು ಇದ್ದಾರೆಯೇ ಅಥವಾ ನಮ್ಮ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವೆಸಗಲು ಇದ್ದಾರೆಯೇ ಎಂದು ಪ್ರಶ್ನಿಸಿದರು.

ಜ್ಞಾನೇಶ್ವರಿ ವಾಪಸ್ ಮನೆಗೆ ಬಂದಾಗ ಮನೆಯವರ ಪ್ರತಿಕ್ರಿಯೆ ಹೇಗಿರಬಹುದೆಂಬ ಆತಂಕ, ಭಯ ಅವಳಲ್ಲಿಯೂ ಇತ್ತು. ಆಕೆಯ ಗಂಡನಿಗೆ ಮಧ್ಯಾಹ್ನದ ನಂತರವೇ ವಿಷಯ ತಿಳಿದದ್ದು. ಮಣಿಪುರದ ಹೆಣ್ಣುಮಕ್ಕಳಿಗಾಗಿ ಹೆಂಡತಿ ನಡೆಸಿದ ಈ ಹೋರಾಟದ ಬಗ್ಗೆ ಆತನಿಗೆ ಅಪಾರವಾದ ಗೌರವ. ಮಕ್ಕಳಿಗೂ ತಾಯಿಯ ಮೇಲೆ ಅಪಾರವಾದ ವಿಶ್ವಾಸ. ಆಕೆಯ ಹಿರಿಯ ಮಗಳು ಗಿರಿಜಾ ಮಹಿಳೆಯರಿಗಾಗಿ ನಾವು ಏನಾದರೂ ಮಾಡಬೇಕೆಂಬುದಕ್ಕೆ ನನ್ನ ತಾಯಿಯೇ ನನಗೆ ಸ್ಫೂರ್ತಿ. ಆಕೆಯಲ್ಲಿ ದೃಢವಾದ ಆತ್ಮಸ್ಥೈರ್ಯ, ಸಂಕಲ್ಪವಿದೆ. ಯಾವ ಸಂದರ್ಭದಲ್ಲೂ ಆಕೆ ದುರ್ಬಲಳಾಗಿ ಕುಸಿದು ಬೀಳುವುದಿಲ್ಲ. 56 ವರ್ಷದ ಜ್ಞಾನೇಶ್ವರಿಯ ತೊಡೆಯ ಮೇಲಿದ್ದ ಮೊಮ್ಮಗುವಿನ ಕಿರುನಗೆಯ ಚಿತ್ರಣವನ್ನು ನೆನಸಿಕೊಳ್ಳುತ್ತಾ, ತಾಯಿಯ ಧೈರ್ಯ ಹಾಗೂ ಸಾಹಸ ಪ್ರವೃತ್ತಿಯನ್ನು ಹೊಗಳುತ್ತಾಳೆ.

ನಾಲ್ಕು ವರ್ಷದ ಹಿಂದೆ ನಡೆಸಿದ ಈ ಹೋರಾಟದ ಪರಿಣಾಮವನ್ನು ಜ್ಞಾನೇಶ್ವರಿ ಹೀಗೆ ಗುರುತಿಸುತ್ತಾರೆ. "ಮಹಿಳೆಯರಿಗೆ ಸಂಬಂಧಪಟ್ಟ ಸಂಗತಿಗಳನ್ನು ಸೈನಿಕ ಪಡೆಗಳು ಎಚ್ಚರಿಕೆಯಿಂದ ಪರಿಶೀಲಿಸುತ್ತಾರೆ. ಲೈಂಗಿಕ ಹಿಂಸೆ, ಅತ್ಯಾಚಾರದಂತಹ ಘಟನೆಗಳು ಕಡಿಮೆಯಾಗಿವೆ. ಆದರೆ ಕಾರಣವಿಲ್ಲದೆ ಬಂಧಿಸುವುದು, ಯಾವುದೇ ವಿವರಣೆಯಿಲ್ಲದೆ, ಸಾಯಿಸುವುದು ನಡೆಯುತ್ತಲೇ ಇದೆ" ಎನ್ನುತ್ತಾರೆ. ಈ ಹನ್ನೆರಡು ಜನ ಮಹಿಳೆಯರು ನಡೆಸಿದ ಪ್ರತಿಭಟನೆಗೆ ರಾಜ್ಯ ಸರ್ಕಾರ – ಕೇಂದ್ರ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯ ಬಗ್ಗೆ, ಮಹಿಳೆಯರಿಗೆ ಅಪಾರವಾದ ಸಿಟ್ಟಿದೆ. ವಿಶೇಷ ಕಾನೂನನ್ನು ತೆಗೆದುಹಾಕುವಂತೆ ಹಲವಾರು ಹೋರಾಟಗಳನ್ನು ನಡೆಸಲಾಗಿದೆ. ಈ ಮಹಿಳೆಯರು ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ನಿರಂತರವಾದ ಈ ಹೋರಾಟಕ್ಕೆ ಶರ್ಮಿಳಾ ಚಾನು ಎಂಬ ಮಹಿಳೆಗೆ ದಕ್ಷಿಣ ಕೊರಿಯಾ ಫೋಕ್ ಸ್ಕೂಲ್‌ನಿಂದ "ಏಷಿಯಾ ಮಾನವ ಹಕ್ಕುಗಳ" ಪ್ರಶಸ್ತಿಯನ್ನು ನೀಡಲಾಗಿದೆ.

ಈ ಎಲ್ಲಾ ಹೋರಾಟಗಳ ಫಲವಾಗಿ ವಿಶೇಷವಾದ ಕಾನೂನನ್ನು ರದ್ದುಗೊಳಿಸುವ ಒಂದು ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ತನ್ನ ವರದಿಯನ್ನು ಸಹ ನೀಡಿದೆ. ಆದರೆ ಈ ವಿಶೇಷ ಕಾನೂನನ್ನು ರದ್ದುಗೊಳಿಸಿದರೆ ನಂತರ ಮಣಿಪುರದಲ್ಲಿ ಶಾಂತಿ ನೆಲೆಸಬಹುದೆ ಎಂಬ ಪ್ರಶ್ನೆ ಮುಖ್ಯವಾದುದು. ಮಯನ್ಮಾರ್ ಗಡಿಪ್ರದೇಶದ ಬಂಡುಕೋರ ಸಂಘಟನೆಗಳಿಗೆ ಮಣಿಪುರ ಒಂದು ಸ್ವರ್ಗವೇ ಆಗಿದೆ. ಸೈನಿಕರ ಹಾಗೂ ಈ ಗುಂಪುಗಳ ನಡುವಿನ ಘರ್ಷಣೆಯಲ್ಲಿ ನರಳುತ್ತಿರುವವರು ಜನಸಾಮಾನ್ಯರು.

❑

'ಪುರುಷರು ಸ್ತ್ರೀಯರನ್ನು ಕುರಿತು ಬರೆದಿರುವ ಸಂಗತಿಗಳೆಲ್ಲವನ್ನೂ ಅನುಮಾನಾಸ್ಪದವೆಂದೇ ಭಾವಿಸಬೇಕು: ಏಕೆಂದರೆ ಪುರುಷರು ಏಕಕಾಲಕ್ಕೆ ನ್ಯಾಯಾಂಗದ ಸೃಷ್ಟಿಕರ್ತರೂ, ಅದರ ನ್ಯಾಯಾಧೀಶರೂ ಆಗಿದ್ದಾರೆ.'

('ಒಡಲ ತುಡಿತಕ್ಕೆ ಕೇಡು' ಪುಸ್ತಕದಿಂದ)



ಯಾಕಪ್ಪ ಶಿವನೇ ಈ ಹೆಣ್ಣು ಜನುಮ!

■ ಬಿ.ಎಂ. ನಾಗರತ್ನ

ಮುನಿಲಕ್ಷ್ಮಿ ಸುತ್ತಲ ಹಳ್ಳಿಗಳ ಹೆಣ್ಣುಮಕ್ಕಳಂತೆ, ದೊಡ್ಡವಳಾದೊಡನೆಯೇ, ಅಂದರೆ ಏಳನೇ ತರಗತಿಗೆ ಶಾಲೆ ಬಿಟ್ಟವಳು. ಒಬ್ಬಳೇ ಮಗಳಾದ್ದರಿಂದ, ಅಪ್ಪ ಅಮ್ಮ ಪ್ರೀತಿಯಿಂದಲೇ ಬೆಳೆಸಿದರು. ಹೆಣ್ಣು ಕೇಳಿ ಬಂದ ಗಂಡುಗಳಲ್ಲೆಲ್ಲ, ಸರಿ ಎನಿಸಿ ಒಪ್ಪಿದ ಪರಮೇಶಿಗೆ ವರದಕ್ಷಿಣೆ, ವರೋಪಚಾರ ಎಂದು ಜೋರಾಗಿಯೇ ಕೊಟ್ಟು ಮುನಿಲಕ್ಷ್ಮಿಯನ್ನು ಮದುವೆ ಮಾಡಿದರು. ಒಬ್ಬಳೇ ಮಗಳ ಮದುವೆ ಗ್ರ್ಯಾಂಡಾಗಿ ಮಾಡಿದ್ರು ಅಂತ ಸುತ್ತಲಿನ ಜನ ಮಾತಾಡಿದರು.

ಹುಡುಗ ಓದಿಲ್ಲ, ವ್ಯವಸಾಯ ಮಾಡ್ತಾನೆ, ರೇಷ್ಮೆ ಬೆಳೆ ಬೆಳೀತಾನೆ ಅಂತ ಗೊತ್ತಿತ್ತು. ಆದರೆ ನಂತರ ತಿಳಿದು ಬಂದಿದ್ದೆಂದರೆ, ಆತನಿಗೆ ಮನೆ ಬಗ್ಗೆ ಜವಾಬ್ದಾರಿ ಅಷ್ಟಕ್ಕಷ್ಟೇ ಅಂತ. ಮಗಳು, "ಅವ್ವ, ಅಕ್ಕಿ ಮನೇಲಿ ಖಾಲಿ ಆಗಿದೆ" ಅಂತ ಫೋನು ಮಾಡೋಳು. ಆಗೆಲ್ಲ ಮಗಳ ಮನೆಗೆ ಕಾಳು, ಬೇಳೆ, ಅಕ್ಕಿ, ತರಕಾರಿ ಸರಬರಾಜಾಗ್ತಾ ಇತ್ತು. ಹೆಂಡ್ತಿ ಮಾತ್ರ ತೌರೂರಿಗೆ ಹೋಗಬಾರ್ದು, ಒಂದ್ಹೊಮ್ಮೆ ಹೋದ್ರೂ ಒಂದು ರಾತ್ರೀನೂ ಉಳೀಬಾರ್ದು ಎಂಬ ಅಳಿಯಂದಿರ ಕಟ್ಟುನಿಟ್ಟು-ಅವರಿಗ್ಯಾಕೆ ಬೇಜಾರು ಅಂತ ಮುರೀಲಾಗ್ದ ರೀತಿಯಲ್ಲಿ ಸಂಸಾರ ನಡೀತಿತ್ತು.

ತುಂಬು ಗರ್ಭಿಣಿ ಮುನಿಲಕ್ಷ್ಮಿಗೆ ತೌರೂರಿಗೆ ಹೆರಿಗೆಗೆ ಬರಲು ಆಸೆ, ಆದರೆ ಯಜಮಾನಗೆ ಅದು ಇಷ್ಟವಿಲ್ಲ. ಹೆಂಡತಿ, ಅತ್ತೆ, ಅತ್ತೂ ಕರೆದು ಅಳಿಯಂದಿರ ಕಾಲು ಕಟ್ಟಿಕೊಂಡ ಮೇಲೆ, ತೌರಿಗೆ ಹೆರಿಗೆಗೆ ಹೋಗಲು ಒಪ್ಪಿಗೆ ಸಿಕ್ಕಿತ್ತು. ಮುನಿಲಕ್ಷ್ಮಿಯ ಹೊಟ್ಟೆ ದೊಡ್ಡದಾಗಿದ್ದು, ಓಡಾಡುವಾಗ, ಕೂರುವಾಗ, ಏಳುವಾಗೆಲ್ಲ ಉಸ್ಸಪ್ಪೋ ಎಂದು ಏದುಸಿರು ಬಿಡುತ್ತಿದ್ದಳು. ಗಂಡನ ಮನೇನಲ್ಲಿ ಆ ಹುಡಿಗಿಗೆ ಅಷ್ಟಕ್ಕಷ್ಟೆ ಪೋಷಣೆ ಆಗಿದ್ದು ಅಂತ ಅಕ್ಕಪಕ್ಕದವರು ಮಾತಾಡಿಕೊಂಡರು.

ಹೆರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಆಯ್ತು. ಆದ್ರೆ ಅವಳಿ, ಜವಳಿ ಹೆಣ್ಣುಮಕ್ಕಳು. ಯಜಮಾನಂಗೆ ಸುದ್ದಿ ಹೋಯ್ತು. ಪ್ರತಿ ದಿನ ಫೋನಿನಲ್ಲೇ ಒಂದನ್ನ ಸಾಯಿಸಿಬಿಡು ಎಂಬ ಒತ್ತಾಯ. ನಿನಗೆ ಬೇಡವಾದ್ರೆ ನಮ್ಮಮ್ಮ ಸಾಕ್ತಾಳೆ, ನಾನು ಮಾತ್ರ ಸಾಯ್ಸಲಾರೆ ಅಂತ ಮುನಿಲಕ್ಷ್ಮಿ ಗೋಳು. ಮಕ್ಕಳನ್ನ ನೋಡ್ಲಿಕ್ಕೆ ಬರ್ಲಿಲ್ಲ. ತಿಂಗಳಾಯ್ತು. ಒಂದೇ ಸಮನೆ ಮುನಿಲಕ್ಷ್ಮಿ ಕೊರಗ್ತಾಳೆ ಅಮ್ಮನ ಮುಂದೆ. ಏನಮ್ಮ ಇದು ಹಿಂಗಾಯ್ತು ನನ್ನ ಮಕ್ಕಳ ಪಾಡು ಅಂತ.

ಒಂದಿವ್ಸ ಇದ್ದಕ್ಕಿದ್ದಂತೆ ಯಜಮಾನ ಬಂದಿದಾನೆ. ಬಂದವ್ನೇ ಹೆಂಡ್ತಿ ಜೊತೆ ಜಗಳ ಶುರು ಮಾಡಿದಾನೆ. ಶಿಶುಗಳಲ್ಲಿ ಒಂದು ತೊಟ್ಟಲ್ಲಿದೆ. ಮತ್ತೊಂದು ತಾಯಿ ಎದೇಲಿ, ಹಾಲು ಕುಡೀತಿದೆ. ಮನೆಗೆ ಬಂದ ಅಳಿಯನಿಗೆ, ಬಿಸಿ ಬಿಸಿ ಕಾಫಿ ತಿಂಡಿ ವ್ಯವಸ್ಥೆ ಆಗಿದೆ. ಆನಂತರವೂ ಮುಂದುವರೆದು ತಾರಕಕ್ಕೇರಿದ್ದ ಜಗಳ, ಬೈದಾಟ ಕೇಳಲಾರದೆ ಸ್ನಾನಕ್ಕೆ ಕೂತ ಅವರಜ್ಜಿ, "ಬಾರೆ, ಮುನಿ-ಬೆನ್ನುಜ್ಜುವಿಯಂತೆ" ಅಂತ ಜೋರಾಗಿ ಕೂಗಿದಾರೆ. ಸರಿಯಮ್ಮ ಅನ್ನುತ್ತಾ, ತೊಡೆ ಮೇಲಿದ್ದ ಮಗೂನ್ನ ಹಾಸಿಗೆ ಮೇಲೆ ಮಲಗಿಸಿ, ಬಚ್ಚಲಿಗೆ ಅವ್ಳು ಎದ್ದು ಹೋಗಿದಾಳೆ.

ಇದೇ ಸರಿಯಾದ ಸಮಯ ಅಂತ ಯಜಮಾನನಿಗೆ ಅನ್ನಿಸಿದೆ. ಪ್ಯಾಂಟು ಜೇಬಲ್ಲಿ ಬಚ್ಚಿಟ್ಟು ತಂದಿದ್ದ ಸಿರಿಂಜ್ ಹೊರಗೆ ತೆಗೆದಿದಾನೆ. ಮಲಗಿದ್ದ ಮಗೂ ಬಾಯಿಗೆ ಅದರಲ್ಲಿದ್ದ ವಿಷವನ್ನ, ಒಂದೊಂದೇ ಹನಿ ಹಾಕಿದಾನೆ. ಮಗು ಕೆಲವು ಹನಿಗಳನ್ನ ಕುಡಿದಿದೆ. ಕಹಿಯಾಗಿ ಗಂಟಲು ಸುಟ್ಟೊಡನೆ,

ಮಕ್ಕಳು ಹುಟ್ಟಿದಾಗ.....

ಮಕ್ಕಳು ಹುಟ್ಟಿದಾಗ ಹೆಸರಿಡುತ್ತಾರೆ
ಕಾದಿಟ್ಟುಕೊಂಡ ವಂಶವೃಕ್ಷದಿಂದ ಆಯ್ಕೆ ಮಾಡಿ
ನನ್ನ ಮಕ್ಕಳು ಹುಟ್ಟಿದಾಗ ಹರಸಿದ್ದೇವೆ
ವಿಶ್ವಾಸದ ಕಣ್ಣೀರು ಮತ್ತು ದಿಗಿಲು ಕಂಪನದಿಂದ

ಮಕ್ಕಳು ಹುಟ್ಟಿದಾಗ
ಕಾಯುತ್ತಿರುತ್ತದೆ ಅವರಿಗಾಗಿ
ಸಣ್ಣ ಶವ ಪೆಟ್ಟಿಗೆಗಳು

ಸಮೀಹ್-ಅಲ್-ಖಾಸಿಮ್

ಪ್ಯಾಲಿಸ್ಟೈನ್

ಉಳಿಕೆ ಹನಿಗಳು ಹೊರಗೆ ಚೆಲ್ಲಿದಾವೆ. ಉಸಿರು ಕಟ್ಟಿದಾಗ, ಮಗು ಜೋರಾಗಿ ಕಿರುಚೋದಕ್ಕೆ ಶುರು ಮಾಡಿದೆ.

ಮಗು ಪ್ರಾಣಾಂತಿಕವಾಗಿ ಕಿರುಚೋದನ್ನ ಕೇಳಿದ ಅಮ್ಮ, ಮಗಳು, ಹಾಗೂ ಅಜ್ಜಿ, ಒಂದೇ ಉಸಿರಿಗೆ ಕೂಗಿಕೊಳ್ತಾ ಬಾಣಂತಿ ಕೋಣೆಗೆ ಬಂದಿದಾರೆ. ಮಗು ಕಟ ಬಾಯಿಂದ ನೊರೆ ಬಂದಿದೆ. ಮಗೂ ಹತ್ರ ಬಾಗಿದ ಮೂವರಿಗೂ, ಮೂಗಿಗೆ ಪಾಲಿಡಾಲ್ ವಾಸನೆ ಹೊಡೀತಾ ಇದೆ. ಮಗು ಏದುಸಿರು ಬಿಡ್ತಾ, ಕಣ್ಣು ತೇಲುಸ್ತಾ ಎಚ್ಚರ ತಪ್ತಾ ಇದೆ. ಅರ್ಧಂಬರ್ಧ ವಿಷ ಇರೋ ಸಿರಿಂಜ್ ಮಗೂನ ಹಾಸಿಗೆ ಆಚೆ ಕಡೆ ಬಿದ್ದಿದೆ. ಮಗೂಗೆ ವಿಷಪ್ರಾಸನ ಆಗಿದೆ ಅಂತ ಕ್ಷಣಾರ್ಧದಲ್ಲಿ ಅವರಿಗೆ ಹೊಳೆದಿದೆ. ಎಲ್ಲಿ ಶಿಶು ಅಪ್ಪ ಅಂತ ನೋಡೋದ್ರೊಳಗೆ, ಆತನಾಗ್ಲೆ ಮಾವ ಕೊಡ್ಸಿದ್ದ ಬೈಕ್ ಹತ್ತಿ ಯಾರ ಕೈಗೂ ಸಿಗದಂತೆ ಹಾರಿಯಾಗಿದೆ.

ಆಗ ಮನೆಯಲ್ಲಿ ಆ ಮೂವರಲ್ಲದೆ ಬೇರೆ ಯಾರಿಲ್ಲ. ಊರಿನವರ ಸಹಾಯ ಪಡೆದು ಮಗೂನ ಹತ್ತಿರದ ಆಸ್ಪತ್ರೆಗೆ ಕರೆದೊಯ್ದಿದಾರೆ. ಪರೀಕ್ಷಿಸಿದ ಡಾಕ್ಟರು, ಇಲ್ಲಿ ಆಗಲ್ಲ–ವಿಕ್ಟೋರಿಯಾಗೆ ಕರೆದುಕೊಂಡು ಹೋಗಿ ಅಂದಿದಾರೆ. ಹೆಣ್ಣುಮಗೂನ್ನ ವಿಷ ಕುಡಿಸಿ ಕೊಲ್ಲೊ ಪ್ರಯತ್ನ ನಡೆದಿದೆ ಅಂತ ಸರ್ಕಾರಿ ಡಾಕ್ಟ್ರು ರಿಪೋರ್ಟ್ ಬರೆದಿದಾರೆ. ಮಗಳ ಅವ್ವ "ನಾನೇ ಸ್ವಾಮಿ ಕುಡಿಸಿದ್ದು, ಮಗೂಗೆ ಡ್ರಾಪ್ ಕುಡಿಸೋ ಬಾಟ್ಲು ಅದಲು ಬದಲು ಆಗಿ ಈ ಅನಾಹುತ ನಡೆದು ಹೋಯ್ತು." ಅಂತ ಹೇಳಿದಾಳೆ. ವಿಕ್ಟೋರಿಯಾದಲ್ಲಿ ದಾಖಲಾದ ಮಗೂನ ಉಸಿರು, ಅಲ್ಲಿಗೆ ಕರೆದೊಯ್ದು ಒಂದು ಗಂಟೆಗೆಲ್ಲ ಪೂರ್ತಿ ನಿಂತೇ ಹೋಗಿದೆ.

ಇರೋ ಮಗು ಹೋಯ್ತು, ಸರಿ. ಮಗಳ ಭವಿಷ್ಯ ಮುಖ್ಯ. ಅಳಿಯಂದೇ ಈ ಕಿತಾಪತಿ ಅಂತ ಅಂದ್ರೆ ಆತನಿಗೆ ಜೈಲು. ಮಗಳಿಗೆ ಬಾಳು ಇಲ್ಲ. ಹಾಗಾಗಿ ನಾನೇ "ಗೊತ್ತಾಗ್ದೆ ಮಗೂಗೆ ವಿಷ ಕೊಟ್ಟುಬಿಟ್ಟೆ"–ಅಂತ ಮುನಿಲಕ್ಷ್ಮಿ ಅವ್ವನೇ ಆ ಪಾಪನ ಮೈಮೇಲೆ ಹೊತ್ಕೊಂಡಿದಾಳೆ. ಇದರ ಓಡಾಟದ ಸಲುವಾಗಿ ಶಿವಮ್ಮ ಲಕ್ಷ ಸಾಲದ ಜೊತೆ ಜೈಲೂ ಅನುಭವಿಸಿದ್ಲು ಅಂತ ಜನ ಮಾತಾಡಿಕೊಂಡ್ರು.

ಅಲ್ಲೇ ಹತ್ತಿರದ ಇನ್ನೊಂದು ಹಳ್ಳಿ ವಿಷಯ. ಎರಡನೇ ಮಗು ಹೆಣ್ಣಾದ್ಲು ಅಂತ, ಯಜಮಾನ ಬಾಣಂತಿ ಕೋಣೇಲಿ ಮೊರದಲ್ಲಿ ಮಲಗಿದ್ದ ಎಳೇ ಮಗೂನ್ನ ಒದ್ದಿದಾನೆ. ಶಿಶು, ಹಜಾರದ ಕಂಭಕ್ಕೆ ಹೋಗಿ ಡಿಕ್ಕಿ ಹೊಡೆದಿದೆ. "ಹೆಂಡ್ತಿಯ ಅಪ್ಪ, ಅವ್ವನ ಮನೇಲಿ ದಾನ ಧರ್ಮ ಮಾಡಿದ್ದರಲ್ಲವೆ, ಅವ್ಳು ಗಂಡು ಮಗೂನ್ನ ಹೆರೋದಕ್ಕೆ"–ಅಂತ ಯಜಮಾನ ಹೊರಗೆ ಬೀದಿನಲ್ಲಿ ಕೂಗಾಡಿದಾನೆ. ಅದನ್ನ ನೋಡಿ, ಅವ್ವ ಮಗಳು, ಎದುರು ಮಾತಾಡಕ್ಕಾಗ್ದೆ ಅತ್ಕೊಂಡು ಒಂದೇ ಸಮನೆ ಸೆರಗಲ್ಲಿ ಕಣ್ಣು, ಮೂಗು ಸೀಟ್ಕೊಂಡ್ರಂತೆ ಅನ್ನೋದು ಮತ್ತೊಬ್ಬಳ ಕಥೆ.

ಇದರ ಪ್ರಸ್ತಾಪ ಯಾಕೆಂದರೆ, ಬೆಂಗಳೂರು ಸುತ್ತಲ ಹಳ್ಳಿಗಳು ಈಗಲೂ, ದೀಪದ ಕೆಳಗಿನ ಕತ್ತಲಿನಂತೆ ಜೀವನ ಸಾಗಿಸ್ತಾ ಇವೆ. ಬೆಂಗಳೂರು ಬೆಳೆದಂತೆ ಅದರ ಪಾಪ ಕೂಪಗಳು ಹಳ್ಳಿಗಳನ್ನೂ ಸುತ್ತವರೆದಿದೆ. ಜನರು ಕೆಲವು ವಿಷಯಗಳಲ್ಲಿ, ಕಂಡೂ ಕಾಣದಂತಹ ಜಾಣತನವನ್ನು ಮೆರೆಯುತ್ತಿದ್ದಾರೆ. ಕಿವಿ ತೆರೆದಿಟ್ಟರೆ ಇಂತಹ ಆಘಾತಕಾರಿ ಸುದ್ದಿಗಳು ಜನರ ನಡುವೆ ಸುಳಿಯುತ್ತ ವಾದರೂ, ಮನೆಯ ಹೊಸ್ತಿಲನ್ನೂ ದಾಟದೆ ಕತ್ತಲಲ್ಲೇ ಕರಗಿ ಹೋಗುವ ಪ್ರಕರಣಗಳೆಷ್ಟೋ! ಮಹಿಳೆಯರಿಗೊಂದು ಗಟ್ಟಿ ವ್ಯಕ್ತಿತ್ವ ನೀಡಬಲ್ಲ ಶಿಕ್ಷಣ, ಅವರ ಸ್ವಾಭಿಮಾನವನ್ನು ಹೆಚ್ಚಿಸಬಲ್ಲ ಸ್ವಾವಲಂಬನೆಯ ಮಾರ್ಗಗಳು ಮಾತ್ರವೇ "ಯಾಕಪ್ಪ ಶಿವನೆ ಈ ಹೆಣ್ಣು ಜನುಮ"– ಎಂಬ ಮಹಿಳೆಯರ ನಿಟ್ಟುಸಿರನ್ನು ನಿವಾರಿಸಲು ಊರುಗೋಲಾಗಬಲ್ಲವು. ❑

ಚಿತ್ತಾರದೊಳಗಿನ ಚಿಕ್ಕೆ

ಇನ್ನೂ ಮರೆತಿಲ್ಲ
ಅದೆಷ್ಟೋ ವರ್ಷಗಳ ಹಿಂದೆ
ಬಿಟ್ಟ ರಂಗೋಲಿ
ಕೆಂಪು ಹಳದಿ ಹಸಿರು
ನೀಲಿ ಗುಲಾಬಿ ಬಣ್ಣದ
ಹುಡಿ ತುಂಬಿ ಎಳೆದ ಗೆರೆಗಳ ಒಳಗೆ
ಚುಕ್ಕಿ ಮರೆಯಾದದ್ದು
ನಡುವೆ ಬಹುಮಾನ ಗೆದ್ದು ಬೀಗಿದ್ದು


ಅದೇಕೋ........ಈಗೀಗ
ಗೆರೆಚುಕ್ಕಿ ಬೆರಳ ಕಲೆಗೂ
ಜಿದ್ದಾಜಿದ್ದಿ
ಅದೇ ಗೆರೆಗಳು ಒನಪಿಲ್ಲದೆ
ಎತ್ತೆತ್ತಲೋ ಸಾಗಿ
ಅಲ್ಲಲ್ಲೇ ಇಣುಕುವ ಬಿಂದುಗಳ
ಅಸ್ತವ್ಯಸ್ತದ ನೋಟಕೆ ನುಡಿದಿದೆ ಸಾಕ್ಷಿ

ಒಮ್ಮೊಮ್ಮೆಯಂತೂ ಧೋಗುಡುವ ರಭಸಕೆ
ಚಿತ್ತಾರದ ಬಣ್ಣವೆಲ್ಲ ಕರಗಿ
ಮಣ್ಣು ಕಲಸು ಮೇಲೋಗರ

ಈ ನೆಲದ ತುಂಬೆಲ್ಲ
ಎಳೆದ ಗೆರೆಗಳ ನಡುವೆ
ಬಣ್ಣ ತುಂಬುವೆಯೆಂದು
ಭ್ರಮಿಸಿದ್ದು ತಪ್ಪೆ?
ನಿನ್ನ ಸೆಳವುಗಳೇಕೋ ಬಿಡದೆ
ಬಗಿಯುತ್ತ ಕೊಲ್ಲುತಿವೆ
ಒಂದೊಂದೇ ನೆನಪುಗಳ
ಚೂರಾಗಿಸುತ್ತಿವೆ ಬೆಳಗಿನ
ಹೊಂಗನಸುಗಳ

ಆ ಕನಸುಗಳಿಗಿನ್ನೂ ಗುಟುಕು ಜೀವ
ಚೂರು ಚೂರಾದ ಕನಸುಗಳ ಆಯ್ದು
ಬೊಗಸೆ ತುಂಬ ಬೇಡುವೆನು
ಇರಲಿ ನಿನ್ನ ಶತವೊಂದುತನಕ್ಕೊಂದು
ಪೂರ್ಣ ವಿರಾಮ
ಹೇಳಿ ಬಿಡು ನಿಜವೊಂದ
ಸಹ್ಯವೇ? ಗೋಜಲು ಗೋಜಲಾದ
ಈ ಬದುಕು

ಸುಶೀಲಾ ಸೋಮಶೇಖರ್



ಗುಬ್ಬಿಹಳ್ಳದ ಸಾಕ್ಷಿಯಲ್ಲಿ; ಮಹಿಳಾ ಸಂವೇದನೆಯ ವಿಸ್ತರಣೆ

● ವಿನಯಾ

ಎಲ್.ಸಿ. ಸುಮಿತ್ರಾ ಅವರ 'ಗುಬ್ಬಿಹಳ್ಳದ ಸಾಕ್ಷಿಯಲ್ಲಿ' ಎಂಬ ಕಥಾಸಂಕಲನ ಮಹಿಳಾ ಸಂವೇದನೆಯ ಹೊಸ ವಿಸ್ತರಣೆಯಾಗಿದೆ. 'ಅಯ್ಯಾ ನಾನು ಹೆಂಗೂಸಲ್ಲ' ಎಂಬ ಅಕ್ಕನ ಮಾತಿನ ಪ್ರತಿನಿಧೀಕರಣವನ್ನು ರೂಪಿಸಿಕೊಳ್ಳಲು ಇರುವ ಬಿಕ್ಕಟ್ಟನ್ನು ಮಹಿಳಾ ಸಂವೇದನೆ ನೀಗಿಕೊಂಡಂತಿದೆ. ಒಳಗೇ ಸುತ್ತಿ ಸುಳಿವ ಹೆಣ್ಣು-ಗಂಡಿನ ಸಂಬಂಧಗಳ ತಾಕಲಾಟದಿಂದ ಬಿಡುಗಡೆಯನ್ನು ಹೊಂದುವುದು ಮಹಿಳಾ ಪ್ರಜ್ಞೆಗೆ ಸುಲಭವಾಗಿರಲಿಲ್ಲ. 'ಹೆಣ್ಣೆಂಬ ಶಬುದ' ಅವಳ ಒಟ್ಟೂ ಐಡೆಂಟಿಟಿಯೇ ಆಗುತ್ತಿತ್ತು. ಈ ಭಾರ ಹೊತ್ತು ತತ್ತರಗೊಳ್ಳುತ್ತಿದ್ದ ಮಹಿಳಾ ಅಭಿವ್ಯಕ್ತಿಯಲ್ಲೀಗ ಆ ಭಾರ ಇಳಿಸಿದ ನಿಸೂರತೆಯಿದೆ. ನಾನು ವ್ಯಕ್ತಿ ಎಂಬ ಹೆಮ್ಮೆಯ ಹೆಜ್ಜೆಯದು. ಈ ಸಂಕಲನದ ಕಥೆಗಳ ವಸ್ತು ಇದಕ್ಕೆ ಸಾಕ್ಷಿ. ಕಡಲ ನಡುವಲ್ಲಿ ಕಾಲಕೆಳಗಿನ ಮರಳು ಜರೆವಾಗ ಸುತ್ತಮುತ್ತಲದನ್ನು ಗಮನಿಸುವುದು ಸಾಧ್ಯವಿಲ್ಲ. ಆದರೀಗ ಶಿಕ್ಷಣ, ಉದ್ಯೋಗ ಮತ್ತು ಸ್ವ-ಅಸ್ತಿತ್ವಗಳ ಮೂಲಕ ಮಹಿಳಾ ಬದುಕಿನಲ್ಲಿ ಗಟ್ಟಿ ನೆಲದ ಮೇಲೆ ಕಾಲೂರಿದ ಸಮಾಧಾನವಿದೆ. ಇದರಿಂದಾಗಿ ಸುತ್ತಲ ಬದುಕನ್ನು



ಗುಬ್ಬಿಹಳ್ಳದ ಸಾಕ್ಷಿಯಲ್ಲಿ

ಲೇ. : ಎಲ್.ಸಿ. ಸುಮಿತ್ರಾ

ಪ್ರ. : ಅಂಕಿತ ಪುಸ್ತಕ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ ಬಸವನಗುಡಿ, ಬೆಂಗಳೂರು - 04

ಮು : 2008

ಬೆಲೆ : ರೂ. 70/-

ತಾಳ್ಮೆಯಿಂದ ನೋಡುವ ಅವಕಾಶ ದಕ್ಕಿದೆ. ಈ ಸಂಕಲನದ ಕತೆಗಳ ವಸ್ತುವಿನ ಹರವು ಬದಲಾದ ಮಹಿಳಾ ಚರಿತ್ರೆಯ ನಿರಂಬಳತೆಯನ್ನು ಸೂಚಿಸುತ್ತದೆ.

ನಮ್ಮ ಪ್ರಜ್ಞೆಯ ತಲಾತಲದಲ್ಲಿ ಮಲೆನಾಡು ನಿಸರ್ಗ ಸೌಂದರ್ಯದ ಪ್ರತೀಕವಾಗಿ ಅಚ್ಚೊತ್ತಿದೆ. ಪಾಟಿ-ಕಡ್ಡಿ ಹಿಡಿದ ಪ್ರತಿಯೊಂದು ಮಗುವೂ ಬರೆವ ಮೊದಲ ಚಿತ್ರದಲ್ಲಿ ಗುಡ್ಡ, ಸೂರ್ಯ, ಮರ, ಪುಟ್ಟ ಮನೆ, ಹರಿವ ಹಳ್ಳ... ಹಾಸುಹೊಕ್ಕಾಗಿದೆ. ಸುಮಿತ್ರಾ ಅವರು ಬದಲಾಗುತ್ತಿರುವ ಮಲೆನಾಡಿನ ಜೀವಂತಿಕೆಯನ್ನು "ಫೋಟೋಜೆನಿಕ್" ಆಗಿಸುವ ಪ್ರಯತ್ನ ಮಾಡುತ್ತಾರೆ. ಕೋಳಿ, ಕೋಳಿಮೊಟ್ಟೆ, ಏಡಿ, ಏಡಿ ಹಿಡಿಯೋ ಕ್ರಮಗಳೆಲ್ಲ ನಮ್ಮ ಸಾಂಸ್ಕೃತಿಕ ಚಹರೆಗಳಾಗಿ ಮುಂದುವರಿಯುತ್ತವೆ. ಬದಲಾಗುತ್ತಿರುವ ಮಲೆನಾಡಿನ ವರ್ಗ-ವರ್ಣ-ವೈರುಧ್ಯಗಳು, ಅಲ್ಲಿ ಬಂಡವಾಳಶಾಹಿಯ ಪ್ರವೇಶ ಇವುಗಳನ್ನು 'ಕಲ್ಲಿನ ಕೋಳಿ' ಕಥೆ ಹೇಳುತ್ತದೆ. ಪಾರಂಪರಿಕ ಉತ್ಪನ್ನ ಸರಕುಗಳಾದ ಕೋಳಿಗಳ ಜಾಗದಲ್ಲೀಗ ವಾಣಿಜ್ಯ ಬೆಳೆಯಾದ ವೆನಿಲ್ಲಾ ಬಂದಿದೆ. ತಿನ್ನುವುದಕ್ಕೆ ಬರದ ಬಳ್ಳಿಗಳನ್ನು ಹಣಕ್ಕಾಗಿ ಬೆಳೆಸುವ ಉಪಕ್ರಮಕ್ಕೆ ಸಾಮಾನ್ಯ ಬದುಕು ಹೊಂದಿಕೊಳ್ಳಲು ಪಡುವ ಕಷ್ಟವನ್ನು ಕಥೆ ಸುಂದರವಾಗಿ ತರುತ್ತದೆ. "ಕೋಳಿ ಯಾಕೆ ಯಾವ ದೇವರ ಫೋಟೋದಲ್ಲೂ ಇಲ್ಲ" ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡು ಸೂಕ್ಷ್ಮವಾಗಿ ಪರಂಪರೆಯ ವಿಶ್ಲೇಷಣೆಯನ್ನು ಮಾಡುತ್ತದೆ.

ಈ ಸಂಕಲನ ಪ್ರಬುದ್ಧ ಮನಸ್ಸಿನ ಅಭಿವ್ಯಕ್ತಿಯಾಗಿದೆ. 'ಹೆಣ್ಣಿನ ಅನುಭವದ ಸೀಮಿತ ವಲಯ' ಎಂಬ ನಮ್ಮ ವಿಮರ್ಶೆಯ ಕ್ಲೀಷೆಗೆ ಪೂರ್ಣವಿರಾಮ ಒದಗಬೇಕೆಂಬ ಒತ್ತಾಯ ಇಲ್ಲಿದೆ. ಸಾಹಿತ್ಯ ಪರಂಪರೆಯ ಅಧ್ಯಯನ ಮತ್ತು ಜೀವನ ಮೀಮಾಂಸೆಗಳ ಬೇಸ್‌ಗಳಿಂದ ತುಂಬ ಪ್ರಜ್ಞಾಪೂರ್ವಕ ಬರವಣಿಗೆಯಾಗಿದೆ. ಇಲ್ಲಿಯ ಬಹುತೇಕ ಕತೆಗಳು ವರ್ತಮಾನಕ್ಕೆ ಮುಖಾಮುಖಿಯಾಗುತ್ತವೆ. ಸಾಮಾನ್ಯವಾಗಿ ಮಹಿಳಾ ಬರವಣಿಗೆಗಳು ಭೂತದ ಹಗೇವು ಹೊಕ್ಕು ದಣಿದುಬಿಡುವ ರೀತಿಯಿಂದ ಇವು ಭಿನ್ನವಾಗುತ್ತವೆ.

ವೈಚಾರಿಕತೆ ಇಲ್ಲಿ ಉದ್ದೇಶಪೂರ್ವಕವಾಗಿ ಗುಪ್ತಗಾಮಿನಿಯಾಗಿದೆ. ಮುನ್ನುಡಿಯಲ್ಲಿ ಟಿ.ಪಿ. ಅಶೋಕ ಅವರು ಗುರುತಿಸುವಂತೆ ಮಹತ್ವಾಕಾಂಕ್ಷೆಯ ರಚನೆ 'ಗುಬ್ಬಿಹಳ್ಳದ ಸಾಕ್ಷಿಯಲ್ಲಿ.' ಈ ಕಥೆ ನಕ್ಸಲೈಟ್ ಚಳವಳಿ ಹೊರಗಿನಿಂದ ಬಂದ ಹೇರಿಕೆ ಎಂಬುದನ್ನು ಪಿಸುನುಡಿಯುವದನ್ನು ಕಾಣಬಹುದು. ಅವನಿಗೆ ನಿಸರ್ಗನ ಮನೆ ಸುಂದರ ತೈಲವರ್ಣ ಚಿತ್ರದಂತೆ ಕಾಣುವಲ್ಲಿ ಅವಳ 'ಕಾಣುವಿಕೆಯ ಮಿತಿ'ಯನ್ನು ಸೂಚಿಸಲಾಗಿದೆ. ಇರುವಿಕೆ ಹಾಗೂ ಕಾಣುವಿಕೆಗಳ ಮಧ್ಯದ ಸತ್ಯದ ಸೂಕ್ಷ್ಮ ಕತೆಯ ಆದ್ಯತೆಯಾಗಿದೆ.

ಅಂತರ್‌ಜಾತಿ ಮದುವೆಗಳಂತಹ ಸಾಮಾಜಿಕ ಪಲ್ಲಟಗಳು ಸರಿಯಾದ ಸಂಕರಗಳಾಗದೆ ಮೇಲ್‌ಸ್ತರದ ಕಡೆಗಿನ ವಾಲುವಿಕೆಯಾಗುವುದನ್ನು ಹೇಳುವ 'ಗುಡಿಯೊಳಗೆ' ಕತೆ ಮೇಲ್ಜಾತಿ, ಮೇಲ್ವರ್ಗಗಳ ಸುಪೀರಿಯಾರಿಟಿಯನ್ನು ಹೇಳುವ 'ಸೀನು ಶಾಲೆ ಬಿಟ್ಟಿದ್ದು,' ಬಡವರ ಬದುಕಿನ ಒತ್ತಡವನ್ನು ಸೂಚಿಸುವ 'ಗಣ ಬಂದು ಹೋದಾಗ' ಇವೆಲ್ಲ ಉತ್ತಮ ಕತೆಗಳಾಗಿವೆ. ಹೆಣ್ಣಿನ ಬದುಕಿನ ಗೋಜಲುಗಳನ್ನು ಹೇಳುವ 'ಸುಳಿಯೊಳಗಿನ ಬೆಂಕಿ', 'ಕಟ್' ಮೊದಲಾದ ಕತೆಗಳಿವೆ. ಆದರೆ 'ಒಂದು ಮುಚ್ಚಳ ಹಾಕಿದ ಪೆಟ್ಟಿಗೆ', ಅದು ಖಾಲಿ ಜಾಗವಲ್ಲ 'ಅಂದಂದೇ ಹುಟ್ಟಿತ್ತು' ಇಂತಹ ಕತೆಗಳು ವಸ್ತುವಿನ ಅನಗತ್ಯ ಸಂಕೀರ್ಣತೆಯಲ್ಲಿ ತೊಡಗಿಕೊಂಡು ಹೆಚ್ಚು ಆಯಾಸಪಟ್ಟಂತೆ ತೋರುತ್ತದೆ. ಅಭಿವ್ಯಕ್ತಿಯ ವೈವಿಧ್ಯಕ್ಕಾಗಿ ಇಂತಹ ಪ್ರಯೋಗಗಳು ನಡೆಯುತ್ತವಾದರೂ ಕತೆಯ ಸಶಕ್ತತೆಗೆ ಅದರಿಂದ ವಿಶೇಷ ಲಾಭವಿಲ್ಲ.

ಒಟ್ಟಾರೆಯಾಗಿ ಕನ್ನಡ ಕಥನ ಪರಂಪರೆಯ ಮುಂಚಾಚಿನಂತೆ, ತನ್ನ ನೆಲದ ಬದುಕನ್ನು ಕ್ಲಿಕ್ಕಿಸುವ ಕತೆಗಳನ್ನು ಕೊಟ್ಟ ಸುಮಿತ್ರಾ ಅಭಿನಂದನಾರ್ಹರು. ❑


ಒಡಲ ತುಡಿತಕ್ಕೆ ಕೇಡು



● *ಚಂಪಾವತಿ ಎಚ್.ಎಸ್.*

'ವಿಮೋಚನಾ' ಮಹಿಳಾ ಹಕ್ಕುಗಳ ವೇದಿಕೆ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡ, ಹಾಗೂ ಲೇಖಕ ಮಂಜುನಾಥ ಅದ್ದೆಯವರು ಕ್ಷೇತ್ರಕಾರ್ಯಮಾಡಿ, ಅಧ್ಯಯನ ನಡೆಸಿ ಹೊರ ತಂದ 'ಒಡಲ ತುಡಿತಕ್ಕೆ ಕೇಡು' – ಪುಸ್ತಕ ಹೆಣ್ಣು ಭ್ರೂಣಹತ್ಯೆ ಹಾಗೂ ಅದರ ಹಿಂದಿರುವ ತಾತ್ವಿಕತೆಯ ಕುರಿತು ಕನ್ನಡದಲ್ಲಿ ದಾಖಲಾದ ಒಂದು ಮಹತ್ವದ ಅಧ್ಯಯನ ಕೃತಿ ಎಂದು ಹೇಳಬಹುದಾಗಿದೆ. ಹೆಣ್ಣು ಶಿಶುಹತ್ಯೆಯ ಬದಲಾಗಿ ಇಂದು ಹೆಣ್ಣು ಭ್ರೂಣಹತ್ಯೆ ಪ್ರಧಾನವಾಗಿ ನಡೆಯುತ್ತಿರುವುದು ಬರಿಯ ಭಾರತದ ಸಮಸ್ಯೆ ಮಾತ್ರವಲ್ಲ, ಜಾಗತಿಕ ಸಮಸ್ಯೆಯಾಗಿದೆ. ಈ ಜಾಗತಿಕ ಸಮಸ್ಯೆಯ ಚಾರಿತ್ರಿಕ ನೋಟ, ಪ್ರಸ್ತುತ ಸಂದರ್ಭದ ವಾಸ್ತವ ವಿಚಾರ, ಅಂಶಗಳು, ಇವುಗಳ ಹಿಂದೆ 'ಮಹಿಳೆ'ಯ ಬಗೆಗಿರುವ ತಾತ್ತ್ವಿಕ ಕಲ್ಪನೆಗಳ ಒಟ್ಟು ಆಕೃತಿಯನ್ನು ಈ ಅಧ್ಯಯನ ಹೊಂದಿರುವುದರಿಂದ ಹೆಣ್ಣು ಭ್ರೂಣಹತ್ಯೆಯ ಬಗ್ಗೆ ಒಂದು ವಿಸ್ತಾರವಾದ ದಾಖಲೆ, ಹಾಗೂ ಎಲ್ಲರೂ ಓದಲೇಬೇಕಾದ ಪುಸ್ತಕ ಎಂದು ಹೇಳಬಹುದಾಗಿದೆ. ವಿಮೋಚನಾದ ಕಾರ್ಯಕರ್ತರ ಹೋರಾಟ, ಶ್ರಮದ ಸಂಘಟಿತ ಅಭಿವ್ಯಕ್ತಿಯನ್ನು ಮಂಜುನಾಥ ಅದ್ದೆಯವರು ಅಚ್ಚುಕಟ್ಟಾಗಿ ಅಧ್ಯಯನ ವನ್ನಾಗಿಸಿದ್ದಾರೆ. ಇಬ್ಬರೂ ಅಭಿನಂದನಾರ್ಹರು.

ಲಿಂಗ ರಾಜಕಾರಣ – ಆರ್ಥಿಕತೆ, ಸಾಮಾಜಿಕ ಸ್ತರ, ಪುರುಷ ಪ್ರಾಧಾನ್ಯದೊಂದಿಗೆ ತಳಕು ಹಾಕಿಕೊಂಡು ಮಹಿಳೆಯ ಮೇಲೆ ನಡೆಸುತ್ತಿರುವ ದೌರ್ಜನ್ಯ–ಹೆಣ್ಣು ಭ್ರೂಣಹತ್ಯೆಯ ಹಂತದಲ್ಲಿಯೇ ಇಂದು ನಡೆಯುತ್ತಿದ್ದು – ಮಹಿಳೆಯ ಬದುಕನ್ನು ಅಲ್ಲಿಯೇ ಮೊಟಕುಗೊಳಿಸಲು ನಡೆಯುತ್ತಿರುವ ಪ್ರಯತ್ನಗಳು ಹಾಗೂ ಅದರ ಅಂಕಿ–ಅಂಶಗಳು ಆತಂಕಕಾರಿಯಾಗಿವೆ. ದುಡ್ಡಿನ ಹಿಂದೆಯೇ ಓಡಬೇಕಾದ ಜಾಗತೀಕರಣದ ಆರ್ಥಿಕ ಹಿನ್ನೆಲೆಯಲ್ಲಿ ಈ ಹೆಣ್ಣು ಭ್ರೂಣಹತ್ಯೆ ಖಾಸಗಿ ಆಸ್ತಿಯನ್ನು ಭದ್ರಪಡಿಸುವ, ವಿಸ್ತರಿಸುವ ಜಾಲದ ಮುಖ್ಯ ಅಂಶವಾಗಿದೆ ಎಂಬುದು ದುರಂತದ ಸಂಗತಿಯಾಗಿದೆ. ಈ ದುರಂತವನ್ನು ಅಂಕಿ ಅಂಶಗಳೊಂದಿಗೆ, ಸಂದರ್ಶನಗಳೊಂದಿಗೆ, ಆರ್ಥಿಕ ವಿಶ್ಲೇಷಣೆಗಳೊಂದಿಗೆ, ರಾಜಕೀಯ ಹರವುಗಳೊಂದಿಗೆ, ಸಾಮಾಜಿಕ ಆಯಾಮಗಳೊಂದಿಗೆ ಲೇಖಕ ಚರ್ಚಿಸಿರುವುದರಿಂದ, ಭ್ರೂಣಹತ್ಯೆಯ ಹಿಂದಿರುವ ಅನೇಕ ಒತ್ತಡಗಳು, ತಾತ್ತ್ವಿಕತೆಗಳು, ಹಾಗೂ ಇತರ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಮುಂದೆ ಕಡಿತಗೊಳ್ಳುವ ಮಹಿಳೆಯರ ಸಂಖ್ಯೆಯಿಂದಾಗಿ ಜಗತ್ತು ಎದುರಿಸಬಹುದಾದ ಸಮಸ್ಯೆಗಳ ಮೇಲೆ ಕೂಡಾ 'ಒಡಲ ತುಡಿತಕ್ಕೆ ಕೇಡು' ಬೆಳಕು ಚೆಲ್ಲುತ್ತದೆ.



ಒಡಲ ತುಡಿತಕ್ಕೆ ಕೇಡು

ಲೇ. : ಮಂಜುನಾಥ ಅದ್ದೆ

ಪ್ರ. : ಸ್ತ್ರೀಲೇಖ ಪ್ರಕಟಣೆ
33/1–9, ತ್ಯಾಗರಾಜ ಲೇಔಟ್
ಜೈ ಭಾರತನಗರ
ಮಾರುತಿ ಸೇವಾನಗರ
ಬೆಂಗಳೂರು – 560 033

ಮು : 2008

ಬೆಲೆ : ರೂ. 150/–

ರೋಮ್ ಗಣಕೂಟ, ಕ್ರಿ.ಪೂ. 2000ರಲ್ಲಿ ಗ್ರೀಸ್, ಆಫ್ರಿಕಾದ ಬುಡಕಟ್ಟುಗಳು ಪಾಪಕಲ್ಪನೆಯಿಲ್ಲದೇ – ಇತಿಹಾಸದಿಂದಲೂ ಭ್ರೂಣಹತ್ಯೆ ನಡೆಸುತ್ತಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಕ್ರಿಸ್ತಶಕದ ಆರಂಭದ ದಿನಗಳಲ್ಲಿ ಪಶ್ಚಿಮ ದೇಶಗಳಲ್ಲಿ ಗಂಭೀರ ಸ್ವರೂಪ ಹೊಂದಿದ್ದ ಹೆಣ್ಣು–ಭ್ರೂಣಹತ್ಯೆ ಏಷ್ಯಾದ ಖಂಡಗಳ ದೇಶದಲ್ಲಿ

... ಮುಸ್ಲಿಂ ಧರ್ಮ ಗ್ರಂಥಗಳು, ಸಂತರು ಹಾಗೂ ಬೌದ್ಧ ಧರ್ಮದ ಹೊರತಾಗಿ ಜಗತ್ತಿನ ಬೇರೆ ಯಾವ ಧರ್ಮವೂ ಹೆಣ್ಣು ಶಿಶುಹತ್ಯೆ ಹಾಗೂ ಭ್ರೂಣಹತ್ಯೆ ಪಾಪಕೃತ್ಯವೆಂದು ಎಲ್ಲೂ ಹೇಳಿಲ್ಲ. ಇಸ್ಲಾಂ ಹಾಗೂ ಬೌದ್ಧ ಧರ್ಮಗಳಲ್ಲೂ ಈ ಬಗ್ಗೆ ಖಚಿತವಾದ ತತ್ತ್ವೋಪದೇಶ ಇಲ್ಲವಾದರೂ; ಮಹಿಳೆಯರ ಆತ್ಮಗೌರವ, ಬದುಕುವ ಹಕ್ಕು, ಅವರ ಮೇಲಿನ ದಬ್ಬಾಳಿಕೆಗಳ ಕುರಿತು ಈ ಎರಡೂ ಧರ್ಮಗಳೂ ಚರ್ಚಿಸಿವೆ.

ಇರಲಿಲ್ಲ. 'ಆಗೆಲ್ಲ ಪೂರ್ವ ದೇಶಗಳಲ್ಲಿ ಪ್ರಕೃತಿಯನ್ನು ಪ್ರಬಲವಾಗಿ ಆಶ್ರಯಿಸಿ ಜನ ಜೀವನ ನಡೆಸಬೇಕಾದ ಅನಿವಾರ್ಯತೆ ಇದ್ದದ್ದರಿಂದ ಪ್ರಕೃತಿ ಧರ್ಮವೇ ಎಲ್ಲಕ್ಕಿಂತ ಮಿಗಿಲಾಗಿತ್ತು. ಹೆಣ್ಣಿನ ಮೇಲೆ ಇಲ್ಲಿಯ ಸಾಮಾಜಿಕ, ಧಾರ್ಮಿಕ ವಿಚಾರಗಳು ಅಷ್ಟಾಗಿ ಮೇಲಾಟ ನಡೆಸಿರಲಿಲ್ಲ' ಎಂಬುದನ್ನು ಏಷ್ಯಾದ ಪ್ರಾಚೀನ ಚರಿತ್ರೆ ಹೇಳುತ್ತದೆ ಎಂಬುದನ್ನೂ ಕೂಡಾ ಈ ಅಧ್ಯಯನ ಗುರುತಿಸುತ್ತದೆ. (ಪುಟ 3). ಭಾರತ, ಚೀನಾ, ಕೊರಿಯ, ಇಂಗ್ಲೆಂಡ್, ಅಮೆರಿಕಾ, ಕೆನಡಾ ಹೀಗೆ ಅನೇಕ ಕಡೆ ವಾಸ್ತವವಾಗಿದ್ದ ಹೆಣ್ಣು ಶಿಶುಹತ್ಯೆ ನಡೆಯುತ್ತಿದ್ದ, ನಡೆಯುತ್ತಿರುವ ಬಗೆಗಳನ್ನು ಲೇಖಕ ಗುರುತಿಸುತ್ತಾರೆ. 1970ರ ಆಜುಬಾಜಿನಲ್ಲಿ ಕೆನಡಾ, ಇಂಗ್ಲೆಂಡ್, ಅಮೆರಿಕಾ ಹೆಣ್ಣು ಶಿಶುಹತ್ಯೆ ಭ್ರೂಣಹತ್ಯೆಯ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದ್ದವು.

ಹೆಣ್ಣು ಶಿಶುಹತ್ಯೆ, ಭ್ರೂಣಹತ್ಯೆಯಲ್ಲಿ ಭಾರತ ಹಾಗೂ ಚೈನಾ ಇಂದು ಎಲ್ಲಾ ದೇಶಕ್ಕಿಂತಲೂ ಹೆಚ್ಚು ದುರಂತದ ಕತೆಗಳನ್ನು ಹೊಂದಿವೆ. ಚೀನಾದಲ್ಲಿ 'ಒಂದು ಮಗು'-ಎಂಬ ಜನಸಂಖ್ಯಾ ನಿಯಂತ್ರಣ ದಿಂದಾಗಿ ಮಹಿಳೆಯರ ಮೇಲೆ ದೌರ್ಜನ್ಯ ಗಳು ಹೆಚ್ಚಾಗಿವೆಯಲ್ಲದೇ ಹೆಣ್ಣು ಶಿಶುಹತ್ಯೆ, ಭ್ರೂಣ ಹತ್ಯೆ ಹೆಚ್ಚಾಗಿದೆ ಎನ್ನುತ್ತಾರೆ ಲೇಖಕರು.

ಭಾರತದಲ್ಲಿ ಹೆಣ್ಣು ಭ್ರೂಣಹತ್ಯೆಯಲ್ಲಿ ಜಾತಿ, ಧರ್ಮ, ವರ್ಗ, ಆರ್ಥಿಕತೆ, ಸಾಮಾಜಿಕತೆಯ ಸಂಕೀರ್ಣ ವಿಚಾರಗಳು ತಳಕು ಹಾಕಿಕೊಂಡಿರುವುದನ್ನು ಸವಿಸ್ತಾರ ವಾಗಿ ಲೇಖಕರು ಗುರುತಿಸಿ, ವಿಶ್ಲೇಷಿಸಿ ದ್ದಾರೆ. ಮನು, ಚಾಣಕ್ಯ, ಶಂಕರಾ ಚಾರ್ಯರು – ಒಟ್ಟಾಗಿ ಇವರೆಲ್ಲ ಪ್ರತಿನಿಧಿಸುವ ಹಿಂದೂಧರ್ಮ ವೈರುಧ್ಯಗಳ ಆಕರವಾಗಿ ಹೇಗೆ ಭ್ರೂಣಹತ್ಯೆಗೆ ಪ್ರೇರಣೆ ನಡೆಯುತ್ತಿದೆ ಎಂಬ ಅಂಶಗಳ ಮೇಲೆ ಪುಸ್ತಕದಲ್ಲಿ ಬೆಳಕು ಚೆಲ್ಲಲಾಗಿದೆ. ಊಳಿಗ ಮಾನ್ಯ, ಭೂಮಾಲಿಕ ವ್ಯವಸ್ಥೆ ಪ್ರಬಲ ವಾಗಿರುವ ಉತ್ತರಭಾರತದಲ್ಲಿ ಭ್ರೂಣ ಹತ್ಯೆಯು ನಿರಂತರವಾಗಿ, ಅವ್ಯಾಹತವಾಗಿ ನಡೆಯುತ್ತಲೇ ಇದೆ.

"ರಾಜಸ್ತಾನದ ಜನರ ಭವಿಷ್ಯ ನಿರ್ಧರಿಸುವ, ನೀತಿಗಳನ್ನು ನಿರೂಪಿಸುವ ರಾಜಧಾನಿ ಜೈಪುರದ ಉಳ್ಳವರ ಕೇರಿಗಳಲ್ಲಿ

ಬಸಿರಲ್ಲಿ ಬಚ್ಚಿಟ್ಟುಕೊಳ್ಳಲಾರದ ಹೆಣ್ಣೆಂಬ ಪಾಪದ ಹೂಗಳಿಗೆ!

1

ಕ್ಷಮೆಯಿರಲಿ ಕಂದಾ
ಲೋಕದ ಜಂಜಡಕೆ
ಕಣ್ಣು ಬಿಡದ ಕೂಸು ನೀನು
ಪುತ್ರ ವ್ಯಾಮೋಹಕ್ಕೆ
ಮಡಿಲು ಮೀಸಲಾಗಿದೆ
ಒಡಲು ಮೀಸಲಾಗಿದೆ
ಬಸಿರೂ ಮೀಸಲಾಗಿದೆ.

ದಿನ ತುಂಬಿದ ಬಸಿರಿಲ್ಲ
ಪ್ರಸವ ವೇದನೆಯಿಲ್ಲ
ಪಿಳಿ ಪಿಳಿ ಕಣ್ಣಳಿಲ್ಲ
ಪಕ ಪಕ ತೆಗೆವ ತುಟಿಗಳು
ಮೊಲೆಗೆ ಬಾಯಿಡುವ ಮುನ್ನ

ಆಕಾರವಿಲ್ಲ
ಆಧಾರವಿಲ್ಲ
ಅಂಗಾಂಗಗಳಿರದ ಹೆಣ್ಣು
ಜೀವಕೋಶದ ಪಿಂಡ
ಬೀದಿ ಬೀದಿಗಳಲಿ
ಛಿದ್ರವಾಗಿದೆ

ಲಿಂಗ ಪತ್ತೆಮಾಡಿ
ನಾಪತ್ತೆ ಮಾಡುವ
ಲೋಕದ ಡೊಂಕಿಗೆ
ಮಾತೆಯ ಮಡಿಲು ಇರಲಿ
ಜೋಗುಳದ ಗುಂಗಿರಲಿ
ಮೀಸಲಾಗಿರಲಿ-ಮೀಸೆಗೆ
ಎಲ್ಲಾ ಮೀಸಲಾಗಿರಲಿ!

2

ಲೋಕದ ಡೊಂಕ ನಾನ್ಹೇಗೆ
ತಿದ್ದಲಿ?
ಬಸಿರ ಉಸಿರಲ್ಲೇ
ಬಚ್ಚಿಟ್ಟು ಕೊಳಲಾರದ
ನನ್ನ ಪ್ರತಿರೂಪ
ಅಂಗಾಂಗ ಕತ್ತರಿಸಿ
ಬರುವ ಬಿಂಬ-ಪ್ರತಿಬಿಂಬ
ಹೆಣ್ಣೆಂಬ ಪಾಪದ ಹೂ!

ಬಸಿರು ಭದ್ರವಲ್ಲ
ಉಸಿರು ಭದ್ರವಲ್ಲ
ಚಾಕು, ಕತ್ತರಿ ದಾಳಿ ಇಟ್ಟವೆ
ಹೆಣ್ಣೆಂಬ ಪಾಪದ ಹೂ ಗೆ
ಜನ್ಮ ಕೊಡಲಾರದ
ಹೆಣ್ಣೆಂಬ ಪಾಪಿಯ ಮೂಕ ವೇದನೆಗೆ
ಪ್ರಸವ ವೇದನೆ ಇಂದು

ಒಡೆತನದ ಹಮ್ಮು
ಲೋಕದ ಅಂತಸ್ತು – ಪ್ರತಿಷ್ಠೆಯ
ಹಮ್ಮು – ಅಹಂಕಾರಗಳಿರಲಿ
ಬಿನ್ನ – ಬಿಂಕಾಣಗಳಿರಲಿ
ಪಾಪದ ಕೊಡ ತುಂಬಿ
ಪಾಪಿಗಳು ಛೀಳಿಡಲಿ
ಇರಲಿ ಹೆಣ್ಣೆಂಬ ಪಾಪದ ಹೂ
ಈ ಬಸಿರಲಿ
ಈ ಉಸಿರಲಿ

3

ಉಸಿರು ಕೊಲಬಹುದು
ಬಸಿರು ಕೊಲಬಹುದು
ಕೊಲಬಹುದೇ ಮುಚ್ಚಿಟ್ಟ ನಿಟ್ಟುಸಿರ?

ದಾಳಿ ಇಟ್ಟಿದೆ ಲದ್ದಿ
ಬುದ್ಧಿ ಮಾಸುವ ಮುನ್ನ
ಒಡಲ ಉರಿ ಕೆರಳುವ ಮುನ್ನ
ದೀಪದಂಚಿಗೆ ಮಂಚು ತಾಗುವ ಮುನ್ನ
ಬಾ ಕಂದ – ನನ್ನಮ್ಮ
ಬಿಂಬ – ಪ್ರತಿಬಿಂಬವಾಗೋಣ
ರೂಪ – ಪ್ರತಿರೂಪವಾಗೋಣ

–ಚಂಪಾವತಿ ಎಚ್.ಎಸ್.

ಹೆಣ್ಣುಶಿಶುವನ್ನು ಸಾಯಿಸಲು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಈ ಕೆಳಗಿನ ವಿಧಾನಗಳನ್ನು ಬಳಸಿಕೊಳ್ಳಲಾಗುತ್ತಿದೆ.

- *ಜೊಂಡು ಹುಲ್ಲಿನ ದಂಟು ತುರುಕಿ ಸಾಯಿಸುವುದು*
- *ಬಾಯಿಗೆ ಕೆಂಪು ಮಣ್ಣು ತುರುಕುವುದು*
- *ಶಿಶುವಿನ ಬೆನ್ನು ಮೂಳೆಯನ್ನು ಹಿಂದಕ್ಕೆ ಲಟಕ್ಕನೆ ತಿರುಗಿಸುವುದು*
- *ಕೊರಳಿಗೆ ಹಗ್ಗ ಅಥವಾ ದೊಣ್ಣೆ ಒತ್ತಿ ಹಿಡಿಯುವುದು*
- *ನೀರಲ್ಲಿ ಮುಳುಗಿಸಿ ಕೊಲ್ಲುವುದು*
- *ಮಣ್ಣಿನ ಮಡಿಕೆಯಲ್ಲಿ ಮಗುವನ್ನು ಹಾಕಿ, ಗೋದಿ ಹಿಟ್ಟಿನಿಂದ ಮಡಿಕೆ ಬಾಯಿ ಮುಚ್ಚುವುದು*
- *ಹಾಲಲ್ಲಿ ಮುಳುಗಿಸುವುದು*
- *ಬತ್ತದ ಕಾಳು ಬಾಯಿಗೆ ತುಂಬುವುದು*
- *ವಿಷದ ಬಳ್ಳಿಗಳ ರಸ ಕುಡಿಸುವುದು*
- *ರಾಸಾಯನಿಕ ಗೊಬ್ಬರದ ಹರಳು ನುಂಗಿಸುವುದು*

ನಿರ್ಭಾವುಕವಾಗಿ, ನಿರಾನಿಮಿತ್ತವಾಗಿ, ಕೇಳುವವರು ಅಸಹ್ಯ ಪಟ್ಟುಕೊಳ್ಳುವಂತೆ ಹೇಳುತ್ತಾ ಹೆಣ್ಣು ಭ್ರೂಣಗಳನ್ನು ಕೊಲ್ಲಲಾಗುತ್ತಿದೆ" (ಪು.10). ಬಿಹಾರ ಭಾರತೀಯ ಸಮಾಜದ ಹೆಣ್ಣಿನ ಸ್ಥಿತಿಯನ್ನು ಬಿಂಬಿಸುತ್ತದೆ ಎನ್ನುವ ಲೇಖಕರು ಮಗು ಗಂಡಾದರೆ ಹೆರಿಗೆ ಮಾಡಿಸಿದ ಸೂಲಗಿತ್ತಿಗೆ 100 ರೂ, ಹೆಣ್ಣಾದರೆ 25 ರೂ ಕೊಡಲಾಗುತ್ತದೆ ಎನ್ನುತ್ತಾರೆ. ಹೆಣ್ಣುಮಗುವನ್ನು ಸಾಯಿಸಿದರೆ ಪ್ರತ್ಯೇಕ 50 ರೂ. ಕಾತಿಹಾರನ ಸೂಲಗಿತ್ತಿ ಅನಿಲದೇವಿ ಹೇಳುತ್ತಾಳೆ, "ನಾವು ಹೆಣ್ಣುಮಗುವನ್ನು ಸಾಯಿಸುತ್ತೇವೆ. ಇಲ್ಲವಾದರೆ ಮಗುವಿನ ತಂದೆ ಹೆರಿಗೆ ಮಾಡಿಸಿದ ಹಣವನ್ನು ನಮಗೆ ಕೊಡುವುದಿಲ್ಲ, ನಾವು ಯಾರ ಬಳಿ ನ್ಯಾಯ ಕೇಳೋಣ' (ಪು. 15).

ಗುಜರಾತ್, ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಮಹಾರಾಷ್ಟ್ರದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಹೆಣ್ಣು ಭ್ರೂಣಹತ್ಯೆಯ ಬಗ್ಗೆ ಎರಡನೆಯ ಅಧ್ಯಾಯ ಬೆಳಕು ಚೆಲ್ಲುತ್ತದೆ. ಈ ಪ್ರದೇಶಗಳಲ್ಲಿ ಭ್ರೂಣ ಹತ್ಯೆಯ ವಿಚಾರವಾಗಿ ಎಫ್.ಐ.ಆರ್. ದಾಖಲಾಗುವುದೇ ಇಲ್ಲ. ಹೆಣ್ಣು ಭ್ರೂಣಹತ್ಯೆ ಮೇಲ್ ಜಾತಿ, ಅಕ್ಷರಸ್ತರು, ಶ್ರೀಮಂತರುಗಳಲ್ಲಿ ಹೆಚ್ಚಾಗಿ ನಡೆಯುತ್ತಿದೆ ಎನ್ನುವ ಲೇಖಕ 1975ರಿಂದ ಈಚೆಗೆ ಕೆಳಜಾತಿ, ಬಡವರು, ಅನಕ್ಷರಸ್ತರಲ್ಲೂ ಹೆಚ್ಚು ಎಂದು ಹೇಳಬಹುದಾದಷ್ಟು ಭ್ರೂಣ ಹತ್ಯೆಗಳು ನಡೆಯುತ್ತಿವೆ ಎನ್ನುತ್ತಾರೆ. ಅಂಕಿ, ಅಂಶಗಳು ಲಿಂಗಾನುಪಾತದ ಮೇಲೆ, ಗಂಡು-ಹೆಣ್ಣು ಶಿಶುಗಳ ಪ್ರಮಾಣವನ್ನು ಸೂಚಿಸುತ್ತದೆ. ದಕ್ಷಿಣ ಭಾರತದ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳದಲ್ಲಿ ನಡೆಯುವ ಭ್ರೂಣಹತ್ಯೆಯ ಮೇಲೆ ಕೂಡಾ ಈ ಅಧ್ಯಯನ ಕೇಂದ್ರೀಕರಿಸಿದೆ. ತಮಿಳುನಾಡಿನಲ್ಲಿ 1992ರಲ್ಲಿ ಶ್ರೀಮತಿ ಜಯಲಲಿತ 'ತೊಟ್ಟಿಲ ಯೋಜನೆ' ತಂದಿದ್ದರೂ ಕೂಡಾ ಹೆಣ್ಣು ಶಿಶುಹತ್ಯೆ ನಿರಂತರವಾಗಿ ನಡೆಯುತ್ತಲೇ ಇದೆ. ಮಾತೃಪ್ರಧಾನ ವ್ಯವಸ್ಥೆ ಹೊಂದಿರುವ ಕೇರಳದ ಜನತೆ ಇಂದು ಏಕಸಂತಾನವನ್ನು ಬಯಸುವ ಹಿನ್ನೆಲೆಯಲ್ಲಿ ಗಂಡೇ ಬೇಕೆಂದು ಹೆಣ್ಣು ಭ್ರೂಣಹತ್ಯೆಗೆ ಮುಂದಾಗಿದ್ದಾರೆ. ಹೆಣ್ಣು ಭ್ರೂಣಹತ್ಯೆ ಇಲ್ಲಿಯೂ ಹೆಚ್ಚಾಗಿದೆ ಎಂದು ಲೇಖಕರು ಗುರುತಿಸುತ್ತಾರೆ.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ನಡೆಯುತ್ತಿರುವ ಹೆಣ್ಣು ಶಿಶು ಹತ್ಯೆ, ಹೆಣ್ಣು ಭ್ರೂಣಹತ್ಯೆ - ಕರ್ನಾಟಕ ಕೂಡಾ ಭಾರತದ ಉತ್ತರ ಪ್ರದೇಶಗಳಿಗಿಂತ ಭಿನ್ನವಾಗಿಲ್ಲ ಎಂಬುದನ್ನು ಸೂಚಿಸುತ್ತದೆ. ಕರ್ನಾಟಕದ ಇತಿಹಾಸದಲ್ಲಿ ವಚನ ಕಾಲದಲ್ಲಿ ಹೋರಾಡಿದ ಅಕ್ಕಮಹಾದೇವಿ, ಕದಿರೆ ಕಮ್ಮವ್ವೆ, ಗೊಗ್ಗವ್ವೆ, ಮುಂತಾದವರ ಪ್ರಸ್ತಾಪವಿದೆ. ಅನಧಿಕೃತ ಸ್ಕ್ಯಾನಿಂಗ್ ಕೇಂದ್ರಗಳು ಕರ್ನಾಟಕದಲ್ಲಿ ತಲೆ ಎತ್ತಿದ್ದು - ಅವು ಕರ್ನಾಟಕದಲ್ಲಿ ನಡೆಯುತ್ತಿರುವ ಹೆಣ್ಣು ಶಿಶುಹತ್ಯೆಗೆ ಸಾಕ್ಷೀಭೂತವಾಗಿವೆ ಎನ್ನುತ್ತಾರೆ ಲೇಖಕರು.

ನಂತರ 'ಒಡಲ ತುಡಿತಕ್ಕೆ ಕೇಡು' - ಪುಸ್ತಕ ವಿಮೋಚನಾ ಮಹಿಳಾ ವೇದಿಕೆಯ ಕಾರ್ಯಕ್ಷೇತ್ರವಾದ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಭ್ರೂಣಹತ್ಯೆಯ ಮೇಲೆ ಹೆಚ್ಚು ಪರಾಮರ್ಶಿಸಿದೆ. ಮಂಡ್ಯ ಜಿಲ್ಲೆಯ ಆರ್ಥಿಕ, ರಾಜಕೀಯ, ಸಾಮಾಜಿಕ ಆಯಾಮಗಳಲ್ಲಿ ಮಹಿಳೆಯರ ಸ್ಥಾನ-ಮಾನ ವಿಶ್ಲೇಷಿಸಿ ಹೇಗೆ ಒಟ್ಟು ಸ್ಥಿತಿ ಹೆಣ್ಣು ಭ್ರೂಣಹತ್ಯೆಗೆ ಪ್ರೇರಣೆ ನೀಡುತ್ತದೆ ಎಂಬುದನ್ನು ಲೇಖಕರು ಸವಿಸ್ತಾರವಾಗಿ ಗುರುತಿಸುತ್ತಾರೆ. ಕೃಷಿ ಪ್ರಧಾನವಾದ ಮಂಡ್ಯದಲ್ಲಿ ಮಹಿಳೆ ಕೃಷಿಯಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದಾಳೆ ಎನ್ನುತ್ತಾರೆ ಲೇಖಕರು. ಭೂಮಾಲೀಕರ ಮನೆಯಲ್ಲಿ ಗೃಹಕೃತ್ಯಗಳಿಗೆ ಬಂಧಿತರಾದ ಹೆಂಗಸರು ಮಧ್ಯಾಹ್ನದ ವೇಳೆಯಲ್ಲಿ ಟಿ.ವಿ.ಗಳಲ್ಲಿ ಜೋತು ಬಿದ್ದು ಮಂಕು ಹಿಡಿದವರಾಗಿದ್ದರೆ, ಭೂ ರಹಿತರ ಮನೆಯಲ್ಲಿ ಕೂಲಿಗೆ ದುಡಿಯುವ ಕೆಳಜಾತಿಯ ಹೆಂಗಸರು ಗದ್ದೆ, ಒಕ್ಕಲು ಮುಂತಾದ ಕೆಲಸಗಳಲ್ಲಿ ಆಯಾಸ ಹೊಂದಿರುತ್ತಾರೆ ಎನ್ನುವ ಲೇಖಕರು ಕೃಷಿ ಸಮುದಾಯದ ಸಾಕುಪ್ರಾಣಿಗಳ ಅವನತಿಗೂ, ಹೆಣ್ಣುಮಕ್ಕಳು ದಿನೇ ದಿನೇ ಅಪ್ರಸ್ತುತರಾಗುತ್ತಿರುವುದಕ್ಕೂ ಸಂಬಂಧವಿದೆ ಎನ್ನುತ್ತಾರೆ. ಅಭಿವೃದ್ಧಿಯ ಪಥಗಳು ಹೆಣ್ಣಿಗೆ ಪೂರಕವಾಗಿಲ್ಲ ಎನ್ನುವ ಮಂಜುನಾಥ ಅದ್ದೆಯವರು ಕೃಷ್ಣರಾಜ ಸಾಗರದ ನೀರಾವರಿಗೆ ಬೃಹತ್ ವಿಸ್ತರಣೆ ಸಿಕ್ಕಂತೆಲ್ಲಾ ಸಾಮಾಜಿಕ ಬದುಕಿನಲ್ಲಿ ಹೆಣ್ಣು ತನಗಿದ್ದ ಪಾತ್ರ-ಮನ್ನಣೆ ಕಳೆದುಕೊಂಡಿದ್ದಾಳೆ ಎನ್ನುತ್ತಾರೆ.

ಮಂಡ್ಯ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಕ್ಷೇತ್ರಕಾರ್ಯ ನಡೆಸಿದ ಅನುಭವಗಳು ಪುಸ್ತಕದಲ್ಲಿವೆ. ಪ್ರತಿ ತಾಲೂಕಿನ ಕೃಷಿ ಜಾಗ, ಹಳ್ಳಿಗಳ ಜನಸಂಖ್ಯೆ, ಪ್ರಮುಖ ಆಸ್ಪತ್ರೆಗಳ ಹೆರಿಗೆ ಚಿತ್ರಣ, ವರದಕ್ಷಿಣೆ, ವಿವಾಹಗಳ ಸ್ವರೂಪ, ಹೆಣ್ಣು ಭ್ರೂಣಹತ್ಯೆಯ ಅಂಕಿ-ಅಂಶಗಳು, ಮಹಿಳೆಯರ ಜೊತೆಗಿನ ಮಾತು-ಕತೆ ಈ ಎಲ್ಲಾ ಅಂಶಗಳನ್ನು ಚರ್ಚಿಸಲಾಗಿದೆ. ನಂತರದಲ್ಲಿ ವೈದ್ಯಕೀಯ ಜ್ಞಾನ - ತಂತ್ರಜ್ಞಾನ ಮತ್ತು ನರ್ಸಿಂಗ್ ಹೋಂಗಳ ಬಗ್ಗೆ ಕೂಡಾ ಚರ್ಚಿಸಲಾಗಿದೆ. ಸರ್ಕಾರದ ನೀತಿಗಳ ವಿಮರ್ಶೆ ಮಾಡಲಾಗಿದೆ. 2003ರಲ್ಲಿ ಪಿ.ಎನ್.ಡಿ.ಟಿ. ಕಾಯ್ದೆಯ ಮೂಲಕ ಭಾರತ ಸರ್ಕಾರ ಭ್ರೂಣಲಿಂಗ ಪತ್ತೆಯನ್ನು ನಿಷೇಧಿಸಿದೆ. ಅದಾಗ್ಯೂ ನಿರಂತರವಾಗಿ ನಡೆಯುತ್ತಲೇ ಇರುವ ಹೆಣ್ಣು ಭ್ರೂಣಹತ್ಯೆಯಿಂದಾಗಿ ಮುಂದಿನ ದಿನಗಳಲ್ಲಿ ಈ ಸಮಾಜ ವೈಪರೀತ್ಯದ ದುರಂತವನ್ನು ಕಾಣುತ್ತದೆ ಎಂಬುದು ಸ್ಪಷ್ಟವಾಗುತ್ತದೆ. 'ಒಡಲ ತುಡಿತಕ್ಕೆ ಕೇಡು' - ಪುಸ್ತಕದ ಕೊನೆಯಲ್ಲಿ ವಿಮೋಚನಾ ವೇದಿಕೆ ಮಂಡ್ಯ ಜಿಲ್ಲೆಯ ತಾಲೂಕುಗಳಲ್ಲಿ ಹಮ್ಮಿಕೊಂಡ ಹೆಣ್ಣು ಭ್ರೂಣಹತ್ಯೆಯ ವಿರೋಧಿ ಹೋರಾಟವನ್ನು ಸವಿಸ್ತಾರವಾಗಿ ನೀಡಲಾಗಿದೆ.

ಹೆಣ್ಣು ಭ್ರೂಣಹತ್ಯೆಗೆ ಪ್ರೇರಕವಾಗಿರುವ ಎಲ್ಲಾ ಸಂಕೀರ್ಣ ವಿಚಾರಗಳನ್ನು ಇಂಟಿಗ್ರೇಟೆಡ್ ಆಗಿ ಚರ್ಚಿಸಿ ವಿಶ್ಲೇಷಿಸಿರುವುದರಿಂದ, ಕ್ಷೇತ್ರ ಕಾರ್ಯ ಹೋರಾಟದ ಅಭಿವ್ಯಕ್ತಿಗಳನ್ನು ಒಳಗೊಂಡಿರುವುದರಿಂದ 'ಒಡಲ ತುಡಿತಕ್ಕೆ ಕೇಡು' ಮಹತ್ವದ ದಾಖಲೆ ಎಂದು ಹೇಳಬಹುದಾಗಿದೆ. ❑



ಕಾಲ್ ಸೆಂಟರ್‌ಗಳೆಂಬ ಬಿಡುಗಡೆಯ ಬೇಡಿ

ಎನ್.ಎಸ್. ಶ್ರೀಧರ ಮೂರ್ತಿ

ಮಹಿಳಾ ಉದ್ಯೋಗದ ಕುರಿತು ಭಾರತದಲ್ಲಿ ಎರಡು ಮುಖ್ಯವಾದ ಸಾಂಸ್ಕೃತಿಕ ಅಪಕಲ್ಪನೆಗಳಿವೆ. ಒಂದು ಕೋಮಲ ಕೆಲಸಗಳನ್ನು ಮಾತ್ರ ಮಹಿಳೆ ಮಾಡಬಲ್ಲರು. ಬಲಿಷ್ಠತೆಯ ಸಾಹಸದ ಕೆಲಸಗಳೆಲ್ಲ ಪುರುಷರಿಗೇ ಮೀಸಲು. ಇನ್ನೊಂದು ಮಹಿಳಾ ಉದ್ಯೋಗವೇನಿದ್ದರೂ ಪುರುಷ ಉದ್ಯೋಗಕ್ಕೆ ಪೂರಕವಾದದ್ದು, ದುಡಿಯುವವನು ಗಂಡಸು, ಹೆಣ್ಣಿನ ಆದಾಯ ಅದಕ್ಕೆ ಪೂರಕವಾದದಷ್ಟೇ. ಇವೆರಡೂ ಒಟ್ಟು ಉದ್ಯೋಗ ಸೃಷ್ಟಿಯ ಮೇಲೇ ಗಮನಾರ್ಹ ಪರಿಣಾಮ ಬೀರಿದೆ. ಸಾರ್ವತ್ರಿಕ ಶಿಕ್ಷಣ ಯಶಸ್ವಿಯಾದ ಹೊಸದರಲ್ಲಿ ಹೆಣ್ಣು ಉಪಾಧ್ಯಾಯಿನಿ ವೃತ್ತಿಗೆ ಹೆಚ್ಚಾಗಿ ಹೋದಳು. ನಂತರ ಗುಮಾಸ್ತೆಯ ಹುದ್ದೆಗಳು, ಸರ್ಕಾರಿ–ಬ್ಯಾಂಕಿಂಗ್ ಮುಂತಾದ ವಲಯದಲ್ಲಿ ರೂಪುಗೊಂಡವು. ಜಾಗತೀಕರಣದ ನಂತರ ಕಾರ್ಯದರ್ಶಿನಿ ಹುದ್ದೆಗಳು ಹೆಚ್ಚಾದವು. ಸೇವಾವಲಯದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ದಾದಿಯರಾಗಿ ಹೆಣ್ಣು ಉದ್ಯೋಗ ಕಂಡುಕೊಂಡಳು. ಕೆಳವರ್ಗದಲ್ಲಿ ಗಾರ್ಮೆಂಟ್ಸ್‌ಗಳು ದೊಡ್ಡ ಪ್ರವಾಣದಲ್ಲಿ ಸ್ತ್ರೀಯುರಿಗೆ ಕೆಲಸ ಒದಗಿಸಿದವು. ವ್ಯವಸಾಯದಲ್ಲಿ 'ಹೆಣ್ಣಾಳು'ಗಳು ಎಂಬ ವಲಯ ಅನಾದಿ ಕಾಲದಿಂದಲೂ ಇದೆ. ಇದಿಷ್ಟನ್ನು ಸ್ಥೂಲವಾಗಿಟ್ಟುಕೊಂಡು ಸ್ತ್ರೀ–ಉದ್ಯೋಗದ ಪರಿಕಲ್ಪನೆ ಭಾರತದಲ್ಲಿ ಹೇಗೆ ಬೆಳೆದಿದೆ ಎಂಬುದನ್ನು ಗಮನಿಸಿದರೆ ಆರ್ಥಿಕವಾಗಿ ಹೆಣ್ಣು ಎಂದಿಗೂ ಗಂಡಿಗೆ ಸರಿಸಮನಾದ ವೇತನ ಪಡೆದೇ ಇಲ್ಲ. ಅವಳು ಶೋಷಣೆಗೆ ಸುಲಭವಾಗಿ ಸಿಕ್ಕುತ್ತಾಳೆ ಎಂಬುದನ್ನು ವ್ಯವಸ್ಥೆ ಕಂಡುಕೊಂಡಿದೆ. ತಾಳ್ಮೆ ಮತ್ತು ಪಾಲನೆ ಇವೆರಡೂ ಸ್ತ್ರೀ–ಉದ್ಯೋಗದ ಹಿಂದಿನ ಮುಖ್ಯವಾದ ಎರಡು ನಿರೀಕ್ಷೆಗಳು. ಅವಳು ಪ್ರತಿಭಾವಂತಳಾಗಿರುವುದಕ್ಕಿಂತ ಈ ಎರಡು ಗುಣಗಳನ್ನು ಹೊಂದಿರುವುದನ್ನು ವ್ಯವಸ್ಥೆ ಅಪೇಕ್ಷಿಸುತ್ತದೆ.

ಕಾಲ್ ಸೆಂಟರ್ ತಂದ ಬದಲಾವಣೆ

'ಕಾಲ್ ಸೆಂಟರ್' ಎಂದು ಜನಸಾಮಾನ್ಯರ ಪರಿಭಾಷೆಯಲ್ಲಿ ಕರೆಸಿಕೊಳ್ಳುವ ಬಿಸಿನೆಸ್ ಪ್ರೋಸೆಸ್ ಔಟ್ ಸೋರ್ಸಿಂಗ್ (BPO)ಗಳು ಮಹಿಳಾ ಉದ್ಯೋಗದ ಪರಿಕಲ್ಪನೆಯಲ್ಲಿ ಗಮನಾರ್ಹ ಬದಲಾವಣೆ ತಂದವು. ಮೂಲತಃ ಇವು ವ್ಯವಸ್ಥೆಯ ಹೊರಗೆ ಶ್ರಮ ಕೇಂದ್ರಗಳನ್ನು ನಿರ್ಮಿಸಿ ಆಡಳಿತಾತ್ಮಕ ವೆಚ್ಚ ತಗ್ಗಿಸುವ ಫ್ರೀಡ್‌ಮೆನ್‌ನ ಸಿದ್ಧಾಂತದಿಂದ ಪ್ರೇರಿತವಾದವು. ಮುಖ್ಯವಾಗಿ ಕಂಪ್ಯೂಟರ್ ಆಧಾರಿತ ಕಂಪನಿಗಳು ಈ ವ್ಯವಸ್ಥೆ ಹೊಂದಿವೆ. ಇದು ಪ್ರಾದೇಶಿಕ ಗಡಿಗಳನ್ನು ದಾಟಿ, ಜಾಗತಿಕ ನೆಲೆಯಲ್ಲಿ ನಡೆಯುವ ಪ್ರಕ್ರಿಯೆಗಳು. ಇವತ್ತು 1.6 ಮಿಲಿಯನ್ ಭಾರತೀಯರು ನೇರವಾಗಿ ಸುಮಾರು 6 ಮಿಲಿಯನ್ ಭಾರತೀಯರು ಪರೋಕ್ಷವಾಗಿ ಈ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಕಾಲ್ ಸೆಂಟರ್ ಉದ್ಯಮ ಗಮನಾರ್ಹ ಬೆಳವಣಿಗೆ ಕಂಡಿದೆ. ವ್ಯಾಪಾರೀ ಜಾಲದ ವಿಸ್ತರಣೆ, ತಾಂತ್ರಿಕ ಕ್ಷೇತ್ರದ ಆಡಳಿತಾತ್ಮಕ ಜವಾಬ್ದಾರಿ ನಿರ್ವಹಣೆ, ಆರೋಗ್ಯ ಕ್ಷೇತ್ರದಲ್ಲಿನ ದಾಖಲಾತಿ ನಿರ್ವಹಣೆ, ಹೋಟೆಲ್–ಏರ್‌ಲೈನ್ ಸೇರಿದಂತೆ ಸೇವಾ ಕ್ಷೇತ್ರಗಳ ಆಡಳಿತ, ಸಂಶೋಧನೆಗೆ ಬೇಕಾದ ಸಂಪನ್ಮೂಲಗಳ ಕ್ರೋಡೀಕರಣ ಇವನ್ನೆಲ್ಲ ಮುಖ್ಯವಾಗಿ ಈ ಕೇಂದ್ರಗಳು ನಿರ್ವಹಿಸುತ್ತವೆ. ಇದರಲ್ಲಿ ದೇಶೀಯ ಕಂಪನಿಗಳಂತೆ, ಅಮೆರಿಕಾ ಸೇರಿದಂತೆ ವಿದೇಶಿ ಸಂಸ್ಥೆಗಳೂ ಗಮನಾರ್ಹವಾಗಿವೆ. ವಿದೇಶಿ ಸಂಸ್ಥೆಗಳ ಪ್ರಧಾನ ಕಛೇರಿಗಳು ಇರುವ ದೇಶಗಳ ವೇಳೆಗೆ ಅನುಗುಣವಾಗಿ (ಅಂದರೆ ಹೆಚ್ಚಾಗಿ ರಾತ್ರಿ ಪಾಳಿಯಲ್ಲಿ) ಕಾಲ್ ಸೆಂಟರ್‌ಗಳು ಕಾರ್ಯ ನಿರ್ವಹಿಸಬೇಕಾಗುತ್ತದೆ.

ಸ್ಪಷ್ಟ ಇಂಗ್ಲಿಷ್, ಉಚ್ಚಾರಣೆ, ಕಂಪ್ಯೂಟರ್‌ನಲ್ಲಿದ್ದ ಬದಲಾವಣೆಗಳನ್ನು ಗ್ರಹಿಸಬಲ್ಲ ಚಾಣಾಕ್ಷತೆ ಮತ್ತು ಮುಖವರಿಯದ ಆಗುಂತಕನ ಬೇಜವಾಬ್ದಾರಿ ವರ್ತನೆ ಸಹಿಸಬಲ್ಲ ತಾಳ್ಮೆ ಇದಿಷ್ಟು ಕಾಲ್‌ಸೆಂಟರ್ ಉದ್ಯೋಗಿಯಾಗಲು ಬೇಕಾದ ಅರ್ಹತೆಗಳು. ಮಧ್ಯಮ ವರ್ಗದ ಮಂದಿ ಕನಸಿನಲ್ಲು ಊಹಿಸಿರದಷ್ಟು ದೊಡ್ಡ ಪ್ರಮಾಣದ ವೇತನ ಈ ಕೇಂದ್ರಗಳ ಆಕರ್ಷಣೆ. ಭಾರತೀಯ ಮಹಿಳೆಯರಿಗೆ ಹೊಂದಬಲ್ಲದು ಎಂದು ಅಮೆರಿಕನ್ನರು ಸರಿಯಾಗೇ ಗ್ರಹಿಸಿದ ಈ ವ್ಯವಸ್ಥೆ ದೊಡ್ಡ ಪ್ರಮಾಣದಲ್ಲಿ ಸ್ತ್ರೀ–ಉದ್ಯೋಗ ಕೇಂದ್ರವಾಗಿ ಇತ್ತೀಚಿನ ವರ್ಷಗಳಲ್ಲಿ ಮಾರ್ಪಟ್ಟಿದೆ. 1981ರಲ್ಲಿ ಈ ವ್ಯವಸ್ಥೆಯಲ್ಲಿ ಸ್ತ್ರೀ ಉದ್ಯೋಗ ಪ್ರಮಾಣ 19.7ರಷ್ಟಿದ್ದರೆ, ಅದು 1991ರಲ್ಲಿ 22.7ರಷ್ಟಕ್ಕೇರಿತು. 2001ರಲ್ಲಿ 25.7ರಷ್ಟಕ್ಕೇರಿದ ಈ ಪ್ರಮಾಣ National Association of Software and Services Companies (NASSCOM) ಅನ್ವಯ ಪ್ರಸ್ತುತ ಶೇ 33ರಷ್ಟಾಗಿದೆ. ಮಹಿಳೆಯರು ಹೆಚ್ಚಾಗಿ ಭಾಗವಹಿಸುತ್ತಿರುವುದು ಕಾಲ್ ಸೆಂಟರ್ ಉದ್ಯಮದ ಪ್ರಗತಿಗೂ ಕಾರಣವಾಗಿದೆ.

'ಸ್ತ್ರೀ ಉದ್ಯೋಗ' ತಂದ ಬದಲಾವಣೆ

ಕಾಲ್ ಸೆಂಟರ್‌ಗಳಲ್ಲಿ ಮಹಿಳೆಯರು ಮುಖ್ಯವಾಗಿ ಪುರುಷರಿಗೆ ಸಮಾನವಾದ ವೇತನ ಪಡೆಯಲು ಆರಂಭಿಸಿದರು. ಹೆಚ್ಚಿನ ವಿದ್ಯಾರ್ಹತೆ ಇಲ್ಲದೆ ಕೂಡ ಪಡೆಯಬಹುದಾದ ಈ ಉದ್ಯೋಗ ಎಷ್ಟೋ ಗ್ರಾಮೀಣ ಮಹಿಳೆಯರಲ್ಲಿ ಅವ್ಯಕ್ತವಾದ 'ಪ್ರತಿಭೆ' ಹೊರಗೆ ಬರಲು ಮುಖ್ಯವಾದ ಕಾರಣವಾಯಿತು. ಪ್ರಮುಖ ಸ್ತರದ ಹುದ್ದೆಗಳಲ್ಲೂ ಮಹಿಳೆಯರಿಗೆ ಕಾರ್ಯನಿರ್ವಹಿಸಲು ಅವಕಾಶ ಸಿಕ್ಕಿದ್ದರಿಂದ ಅವರಲ್ಲಿ ಮೂಡಿದ್ದ ಕೀಳರಿಮೆ ದೂರವಾಗಲು ಸಾಧ್ಯವಾಯಿತು. ಎಲ್ಲಕ್ಕಿಂತ

ಹೆಚ್ಚಾಗಿ ಕಾಲ್ ಸೆಂಟರ್‌ಗಳು ತಂದ ದೊಡ್ಡ ಪ್ರಮಾಣದ ವೇತನ ಮಧ್ಯಮ ವರ್ಗದ ಹುಡುಗಿಯರಲ್ಲಿ ವಿವಾಹ ಕುರಿತು ಹೆಚ್ಚು ಸ್ವಾತಂತ್ರ್ಯದ ಆಯ್ಕೆಗಳು ಲಭಿಸುವಂತೆ ಮಾಡಿತು. ಒಂದು ಕಾಲದಲ್ಲಿ ಪ್ರಶ್ನೆ ಕೂಡ ಮಾಡದೆ ಅಪ್ಪ ಹೇಳಿದವನಿಂದ ತಾಳಿ ಕಟ್ಟಿಸಿಕೊಳ್ಳುತ್ತಿದ್ದ ಹುಡುಗಿಯರು ತಮ್ಮ ಬೇಡಿಕೆಗಳನ್ನು ಮುಂದಿಡುವುದು ಸಾಧ್ಯವಾಯಿತು. 'ಹುಡುಗಿಯರು ಸಿಕ್ಕುವುದು ಕಷ್ಟ' ಎಂಬ ಸುದ್ದಿ ಮದುವೆ ಮಾರ್ಕೆಟ್‌ನಲ್ಲೀಗ ಜನಜನಿತ ವಾಗಿ ನಿಜವಾದ ಅರ್ಥದ ಸ್ತ್ರೀವಾದ ವಿಚಿತ್ರ ರೀತಿಯಲ್ಲಿ ಸಾಧ್ಯವಾಗಿದೆ. ಸಾಮಾಜಿಕವಾಗಿ ಕೂಡ ಸಂಸಾರದಲ್ಲಿ ಹೆಣ್ಣು ಗಂಡಿನ ಅಡಿಯಾಳಾಗದೆ ತನ್ನ ಹಕ್ಕುಗಳನ್ನು ಪ್ರತಿಪಾದಿಸುವುದು ಈಗ ದೊರಕಿರುವ ಆರ್ಥಿಕ ಸ್ವಾತಂತ್ರ್ಯದಿಂದ ಸಾಧ್ಯವಾಗಿದೆ. ಕೊಳ್ಳುವ ಶಕ್ತಿಯಲ್ಲೂ ಆಗಿರುವ ಬದಲಾವಣೆ ಹೆಣ್ಣಿನ ಅಪೇಕ್ಷೆಗಳ ವಿಸ್ತಾರಕ್ಕೆ ಕಾರಣವಾಗಿದೆ.

ಕತ್ತಲಾಗುವ ಮೊದಲು ಹೆಣ್ಣು ಮನೆ ಸೇರಬೇಕು, ಪರ ಪುರುಷ ರೊಂದಿಗೆ ಹೆಚ್ಚಿನ ಸಮಯ ಕಳೆಯಬಾರದು, ಮಗುವಿನ ಲಾಲನೆ ಪೋಷಣೆಗಳೇ ಹೆಣ್ಣಿನ ಆದ್ಯ ಕರ್ತವ್ಯಗಳು ಎಂಬ ಸಾಂಸ್ಕೃತಿಕ ಮೂಢ ನಂಬಿಕೆಗಳು ಕಾಲ್ ಸೆಂಟರ್ ತರುತ್ತಿರುವ ಕಾಂಚಾಣದ ಎದುರು ಎಂದೋ ದಿಕ್ಪಾಪಾಲಾಗಿದೆ. ಹೆಣ್ಣಿನ ದುಡಿಮೆಗೆ ಎಲ್ಲಾ ರೀತಿಯ ಅನುಕೂಲವನ್ನು ಪತಿದೇವರು ಮತ್ತು ಅತ್ತೆ–ಮಾವಂದಿರು ಮಾಡಲು ಸಜ್ಜಾಗಿರುವ ದೃಶ್ಯ ಅತೀ ಸಾಮಾನ್ಯವಾಗಿದೆ. ಹೆತ್ತವರೂ ಕೂಡ ಮಗಳು ಮದುವೆಯಾಗುವ ಮುನ್ನ 'ಕಾಲ್ ಸೆಂಟರ್'ಗಳ ಮೂಲಕ ಸಂಪಾದಿಸಲಿ ಎಂದು ಅಪೇಕ್ಷೆ ಪಡುತ್ತಿದ್ದಾರೆ. ಒಟ್ಟಿನಲ್ಲಿ ಕಾಲ್‌ಸೆಂಟರ್‌ಗಳು ಭಾರತೀಯ ಸಾಮಾಜಿಕ ರಂಗದ ಮೇಲೆ ಗಮನಾರ್ಹ ಪರಿಣಾಮ ಬೀರಿವೆ. ಆರಂಭದಲ್ಲಿ ಈ ಕುರಿತು ಮಡಿವಂತಿಕೆ ತೋರಿದವರೂ ಈಗ ಇಲ್ಲಿ ದೊರೆಯುತ್ತಿರುವ ಆಯ್ಕೆ ಮತ್ತು ಆದಾಯಗಳಿಗೆ ಮನಸೋತು, 'ಹೆಣ್ಣು' ದುಡಿದರೆ ಇಲ್ಲಿ ದುಡಿಯಬೇಕು ಎಂಬ ತೀರ್ಮಾನಕ್ಕೆ ಬರುತ್ತಿದ್ದಾರೆ. ಹೆಣ್ಣಿನ ಸ್ಥಾನಮಾನದ ಕುರಿತು ಹಲವಾರು ಪೂರ್ವಾಗ್ರಹಗಳು ನಿವಾರಣೆಯಾಗುವಲ್ಲಿ ಈ ಬೆಳವಣಿಗೆ ನೆರವಾಗಿದೆ.

ಕಾಲ್ ಸೆಂಟರ್‌ನಲ್ಲಿನ 'ಹೆಣ್ಣಿನ ಸಮಸ್ಯೆಗಳು'

ಪತ್ರಕರ್ತೆಯರಾಗಿದ್ದರೂ ಪ್ರಮುಖ ದಿನಪತ್ರಿಕೆಗಳು ಒಂದು ಕಾಲದಲ್ಲಿ ಮಹಿಳೆಯರಿಗೆ 'ರಾತ್ರಿ ಪಾಳಿ' ನೀಡುತ್ತಿರಲಿಲ್ಲ. ಅಗತ್ಯ ಕ್ಷೇತ್ರಗಳಲ್ಲೂ ಮಹಿಳೆಯರಿಗೆ 'ರಾತ್ರಿ ಪಾಳಿ' ಅನಿವಾರ್ಯವಾದ ವಿದ್ಯಮಾನವಾಗಿದೆ.

ಭಾರತೀಯ ವಾಣಿಜ್ಯ ಒಕ್ಕೂಟ "ಸ್ತ್ರೀ ಉದ್ಯೋಗದ ಹೊಸ ಸಾಧ್ಯತೆಗಳು" ಎಂಬ ಸಮೀಕ್ಷೆಯಲ್ಲಿ ಗುರುತಿಸಿರುವಂತೆ ಕಾಲ್ ಸೆಂಟರ್ ಗಳಲ್ಲಿನ ಬಹುತೇಕ ಸಮಸ್ಯೆಗಳು ಈ ಅಂಶದ ಮೇಲೆಯೇ ಹೆಚ್ಚಾಗಿ ಕೇಂದ್ರೀಕರಣಗೊಂಡಿವೆ.

ಭಾರತೀಯ ಸಮಾಜ ಹೆಚ್ಚು ಸಾಂಪ್ರದಾಯಿಕ ಎಂಬುದನ್ನು ಗಮನಿಸಿದಾಗ, ಇಲ್ಲಿ ಹೆಣ್ಣಿನ 'ಪರೋಕ್ಷ ದುಡಿಮೆ' ದೊಡ್ಡ ಪ್ರಮಾಣದ್ದು ಎಂಬುದನ್ನು ಗುರುತಿಸಬಹುದು. ವಿಶ್ವ ಸಂಸ್ಥೆ ಅಂದಾಜಿನಂತೆ ಭಾರತೀಯ ಮಹಿಳೆ ತನ್ನ ಸಂಸಾರದ ನಿರ್ವಹಣೆಗೆ ಕನಿಷ್ಠ 35 ಗಂಟೆಗಳನ್ನು ಪ್ರತೀ ವಾರವೂ ವ್ಯಯಿಸುತ್ತಾಳೆ. ಎಲ್ಲಾ ಸ್ತರದ ಮಹಿಳೆ ಯರಿಗೂ ಕನಿಷ್ಠ ಪ್ರಮಾಣದ ಏರಿಳಿತ ಹೊರತು ಪಡಿಸಿದರೆ ಇದು ಅನಿವಾರ್ಯವಾಗಿರುವುದನ್ನು ಸಮೀಕ್ಷೆ ಗುರುತಿಸಿದೆ. ಕಾಲ್ ಸೆಂಟರ್‌ನಲ್ಲಿ ದುಡಿಯುವ ಮಹಿಳೆ ಎರಡೂ ರಂಗದಲ್ಲಿ ಸಮತೋಲನ ಸಾಧಿಸಲು, ಬೇರೆ ದುಡಿಯುವ ಮಹಿಳೆಯರಿಗಿಂತ ಹೆಚ್ಚಾಗಿ ಶ್ರಮಿಸಬೇಕಾಗಿದೆ. ಏಕೆಂದರೆ 'ಕಾಲ್ ಸೆಂಟರ್ ಉದ್ಯೋಗ'ದಲ್ಲಿ ನಿರಂತರ ಪರಿಣತಿ ಅಗತ್ಯವಾಗಿದೆ. ಕೊಂಚ ಕಲಿಯುವಿಕೆಯಲ್ಲಿ ಹಿಂದೆ ಬಿದ್ದರೂ ಸ್ಪರ್ಧಾತ್ಮಕ ವೃತ್ತದಿಂದ ಹೊರಬಂದಂತೆಯೇ. ಈ ಅಂಶ ಹೆಣ್ಣಿನ ಮೇಲೆ ಅಧಿಕ ದೈಹಿಕ ಮತ್ತು ಮಾನಸಿಕ ಒತ್ತಡಕ್ಕೆ ಕಾರಣವಾಗಿದೆ. ಇದಕ್ಕೆ ಇತ್ತೀಚಿನ ಮನಃಶಾಸ್ತ್ರೀಯ ಸಮೀಕ್ಷೆಗಳು ನೀಡಿದ ಫಲಿತಾಂಶಗಳೂ ಪೂರಕವಾಗಿವೆ.

ರಾತ್ರಿ ಪಾಳಿಯಲ್ಲಿನ ಹೆಣ್ಣಿನ ಸುರಕ್ಷತೆ ಬಗ್ಗೆ ಎಂದಿನಿಂದಲೂ ಪ್ರಶ್ನೆಗಳು ಏಳುತ್ತಲೇ ಇವೆ. ಪ್ರತಿಭಾ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಸೇರಿದಂತೆ ಕೆಲ ಪ್ರಕರಣದಲ್ಲಿ ಇದರ ಭೀಕರತೆ ಹೊರಗೆ ಬಂದಿದೆ. ಆದರೆ ಅಲ್ಲಿನ ಅನಾರೋಗ್ಯಕರ ಸ್ಥಿತಿ ಬಗ್ಗೆ ಹೆಚ್ಚಿನ ವಿಷಯಗಳು ಹೊರ ಜಗತ್ತಿಗೆ ತಿಳಿದಿಲ್ಲ. ಸಂಕುಚಿತ ಮನೋಭಾವದ, ವಿಕೃತ ಮನಃಸ್ಥಿತಿಯ ಭಾರತೀಯ ಪುರುಷ ಸಮಾಜದ ಸ್ವಭಾವ ಕಾಲ್ ಸೆಂಟರ್‌ನಲ್ಲಿ ಕಿಂಚಿತ್ತು ಬದಲಾಗಿಲ್ಲ. ಮಾತ್ರವಲ್ಲ, ಅಪರಾತ್ರಿಯ ಕಾರಣವೂ ಸೇರಿ ಇನ್ನಷ್ಟು ವಿಕಾರವಾಗಿದೆ. ಹೆಣ್ಣಿನ ಜೈವಿಕ ಬದಲಾವಣೆಗಳನ್ನು ಗೇಲಿ ಮಾಡಬಲ್ಲ ಇಲ್ಲಿನ ವಾತಾವರಣದಲ್ಲಿ 'ಹೆಣ್ಣು' ಸಂಕೋಚದ ಎಲ್ಲಾ ತೆರೆ ಸರಿಸಿದರೆ ಮಾತ್ರ ಉಳಿದುಕೊಳ್ಳಬಲ್ಲಳು ಎಂಬ ಅನಿವಾರ್ಯತೆ ಇದೆ. ಭಾರತೀಯ ವಾಣಿಜ್ಯಿಕ ಸಂಸ್ಥೆಗಳ ಒಕ್ಕೂಟ ರಾತ್ರಿ ಪಾಳಿಯಲ್ಲಿನ 216 ಮಹಿಳೆಯರನ್ನು ಸಮೀಕ್ಷಿಸಿ ರೂಪಿಸಿರುವ ವರದಿ ಹಲವಾರು ಎದೆ ನಡುಗಿಸುವ ಕಂಬನಿಯ ಕತೆಗಳನ್ನು ಹೊಂದಿದೆ. ಗ್ರಾಹಕರಿಂದಲೂ ತುಚ್ಛೀಕರಣಕ್ಕೆ ಒಳಗಾಗುವ ಮಹಿಳೆ ಸದಾ ಸಹೋದ್ಯೋಗಿಗಳ ವಿಕೃತಿಗೆ ಜಡವಾಗೇ ಇಲ್ಲಿ ಕೆಲಸ ಮಾಡಬೇಕಾಗಿದೆ. ಲೈಂಗಿಕ ಕಿರುಕುಳ ಇಲ್ಲದಿರುವ ಕಡೆ ಕೂಡ ಅಸಹಕಾರ, ಉದ್ದೇಶಪೂರ್ವಕವಾಗಿ ಮಾಹಿತಿ ಮರೆಮಾಡುವಿಕೆ, ದಾಖಲಾತಿಗಳಲ್ಲಿ ತಾರತಮ್ಯ ಇಂತಹ ಪುರುಷರ ಸ್ಯಾಡಿಸ್ಟ್ ವರ್ತನೆ ಯನ್ನು ಮಹಿಳೆಯರು ಸದಾ ಇಲ್ಲಿ ಸಹಿಸಬೇಕಾಗಿದೆ.

ಮುಖ್ಯವಾದ ಅಂಶವೆಂದರೆ, ಸ್ತ್ರೀಯರು ಕಾಲ್ ಸೆಂಟರ್‌ಗಳಲ್ಲಿ ಉತ್ತಮ ಆದಾಯ ಪಡೆಯುತ್ತಿದ್ದಾರೆ ಎಂಬುದು ನಿಜವಾದರೂ ಅದು ಸಂಪೂರ್ಣ ತಾರತಮ್ಯದಿಂದ ಹೊರತಾಗಿಲ್ಲ. ಹೆಣ್ಣಿಗೆ ಇರುವ ಸಹಜವಾದ ಸಾಂಸಾರಿಕ ಜವಾಬ್ದಾರಿ, ಸಂಚಾರದ ಸಮಸ್ಯೆ, ಅಗತ್ಯ ವಾಗಿರುವ ರಿಯಾಯಿತಿ ಎಲ್ಲವನ್ನು ಗಮನಿಸಿರುವ ಆಡಳಿತ ಇಲ್ಲಿಯೂ ತಾರತಮ್ಯ ಮಾಡಿದೆ. ಸದಾ ಪುರುಷರಿಗಿಂತ ಮಹಿಳೆ ಕಡಿಮೆ ಸಂಬಳವನ್ನು ಸಮಾನ ಹುದ್ದೆಯಲ್ಲಿ ಪಡೆಯುವುದು ಸಾಮಾನ್ಯವಾಗಿದೆ. ಹೆಚ್ಚಿನ ಮಾಹಿತಿ ತಂತ್ರಜ್ಞಾನದ ಸಂಸ್ಥೆಗಳು ಉನ್ನತ ಹುದ್ದೆಯನ್ನು ಮಹಿಳೆಯರಿಗೆ ನೀಡದೆ ಕೆಳಸ್ತರದ ಹುದ್ದೆಗಳನ್ನೇ ನೀಡಿಕೊಂಡು ಬಂದಿದೆ. ಬಡ್ತಿಯಲ್ಲೂ ಕೂಡ ಇಂತಹ ತಾರತಾಮ್ಯ ಸಾಮಾನ್ಯವಾಗಿದೆ. ಈ ಅರ್ಥದಲ್ಲಿ ದುಡಿಯುವ ಮಹಿಳೆ ಕುರಿತು ಎಂದಿನಿಂದ ಇರುವ ಸಾಂಸ್ಕೃತಿಕ ಅಪಕಲ್ಪನೆಗಳು ಪ್ರಚ್ಛನ್ನ ಸ್ಥಿತಿಯಲ್ಲಿ ಇಲ್ಲಿಯೂ ಉಳಿದು ಕೊಂಡಿದೆ.

ಮುಂದಿನ ದಾರಿ ಏನು?

ಕಾಲ್ ಸೆಂಟರ್‌ಗಳು ಮಹಿಳಾ ಉದ್ಯೋಗದಲ್ಲಿ ಬದಲಾವಣೆ ತಂದಿರುವುದು ನಿಜ? ಆದರೆ ಅದು ಎಷ್ಟು ದಿನ ಎಂಬ ಆತಂಕ ಈಗ ಹೆಚ್ಚು ಸ್ಪಷ್ಟವಾಗುತ್ತಿದೆ. ಕಳೆದ ಸೆಪ್ಟೆಂಬರ್‌ನಿಂದ ಡಿಸೆಂಬರ್ ನಡುವಿನ ಅವಧಿಯಲ್ಲಿ 10,000 ಕಾಲ್‌ಸೆಂಟರ್ ಉದ್ಯೋಗಿಗಳು ಕೆಲಸ ಕಳೆದು ಕೊಂಡಿದ್ದಾರೆ. ಎಚ್ಚರಿಸುವಂತೆ ಮುಂದಿನ ಆರು ತಿಂಗಳಲ್ಲಿ ಇನ್ನು 50,000 ಜನ ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಜಗತ್ತಿನ ಆರ್ಥಿಕ ಹಿಂಜರಿತದ ದರ ಹೀಗೆ ಮುಂದುವರೆದರೆ ಈ ಪ್ರಮಾಣ ಇನ್ನಷ್ಟು ಹೆಚ್ಚುವ ಸಾಧ್ಯತೆಗಳಿವೆ. ಗಮನಿಸಬೇಕಾದ ಸಂಗತಿ ಎಂದರೆ ಹೀಗೆ

ಕೆಲಸ ಕಳೆದುಕೊಳ್ಳುತ್ತಿರುವವರಲ್ಲಿ ಹೆಚ್ಚಿನವರು ಮಹಿಳೆಯರೇ ಆಗಿದ್ದಾರೆ, ಇದರ ಪರಿಣಾಮ ಮತ್ತಷ್ಟು ಭೀಕರವಾಗಬಲ್ಲ ಅಪಾಯವಿದೆ. ಏಕೆಂದರೆ ಇವತ್ತು ಭಾರತದಲ್ಲಿ ಉದ್ಯೋಗಗಳ ಸಾಧ್ಯತೆ ಸಾಕಷ್ಟು ಸೀಮಿತವಾಗುತ್ತದೆ. ದೇಶೀಯ ಸಾಧ್ಯತೆಗಳು ಹೆಚ್ಚಾಗಿ ನಶಿಸಿ ಹೋಗಿವೆ. ದೊಡ್ಡ ಪ್ರಮಾಣ ವೇತನ ಪಡೆಯುತ್ತಿದ್ದ ಕಾಲ್ ಸೆಂಟರ್‌ನ ಮಹಿಳಾ ಉದ್ಯೋಗಿಗಳಿಗೆ ಪರ್ಯಾಯವಾದ ಉದ್ಯೋಗ ಯಾವುದೂ ಇಲ್ಲ. ಉದ್ಯೋಗದಲ್ಲಿನ ಆರ್ಥಿಕ ಲಾಭಗಳನ್ನು ಗಮನದಲ್ಲಿರಿಸಿ ಗೃಹ ಖರೀದಿ ಸೇರಿದಂತೆ ದೀರ್ಘಾವಧಿ ವೆಚ್ಚಗಳನ್ನು ಮಾಡಿದವರು ದೊಡ್ಡ ಪ್ರಮಾಣದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೂಡಿದ್ದ ಸ್ವಾಭಿಮಾನದ ಚಿತ್ರ ಅಲೆ ಏರಿಳಿತದ ಆಟದಂತೆ ಕರಗಿ ಹೋಗುವ ಅಪಾಯ ಎದುರಾಗಿದೆ. ಅಮೆರಿಕಾದ ಹೊಸ ಆಡಳಿತ ಹೊರ ಗುತ್ತಿಗೆ ವಿಚಾರದಲ್ಲಿ ತಾಳಿರುವ ಕಠಿಣ ನಿಲುವು ವಾಸ್ತವಕ್ಕೆ ಇಳಿದಲ್ಲಿ ಪರಿಸ್ಥಿತಿ ಇನ್ನಷ್ಟು ಭೀಕರವಾಗಲಿದೆ. ಆತ್ಮಹತ್ಯೆ, ವೇಶ್ಯಾವಾಟಿಕೆ ಸೇರಿದಂತೆ ಹಲವು ಅಪಾಯದ ದಾರಿಗೆ ಇಂತಹ ಮಹಿಳೆಯರು ಇಳಿಯುತ್ತಿರುವ ಸುದ್ದಿಗಳು ಅಲ್ಲಲ್ಲಿ ಕೇಳಿಬರುತ್ತಿರುವುದು ದಟ್ಟವಾಗಬಲ್ಲದಾಗಿದೆ.

ದೊಡ್ಡ ಪ್ರಮಾಣದಲ್ಲಿ ಉದ್ಯೋಗಿಗಳನ್ನು ಹೊಂದಿರುವ ಕಾಲ್ ಸೆಂಟರ್ ಉದ್ಯಮದಲ್ಲಿ ಕೆಂಪು ಬಾವುಟ ಹಾರಾಡಿಯೇ ಇಲ್ಲ ಎಂಬಂತಹ ಸ್ಥಿತಿ ಇರುವುದರಿಂದ, ಇದಕ್ಕೆ ಪ್ರತಿಭಟನೆ ಕೂಡ ಕಷ್ಟಸಾಧ್ಯವಾಗಿದೆ. ಇಲ್ಲಿನ ಬಹುತೇಕ ಸಂಸ್ಥೆಗಳ ಉದ್ಯೋಗಿಗಳು ತಾಂತ್ರಿಕವಾಗಿ ಭಾರತಕ್ಕೇ ಸೇರಿಯೇ ಇಲ್ಲ. ಹೆಸರಿನಿಂದ ಹಿಡಿದು ವಿವರಗಳವರೆಗೆ ಎಲ್ಲಾ ದಾಖಲಾತಿಗಳಲ್ಲೂ ಅವರು ಭಾರತೀಯರು ಎಂಬ ಅಂಶ ಬರದಂತೆ ಎಷ್ಟೋ ಸಂಸ್ಥೆಗಳು ಎಚ್ಚರವಹಿಸಿ, ಇದರಿಂದ ಈ ನೆಲದ ಕಾನೂನು ಇಲ್ಲಿಗೆ ಅನ್ವಯವಾಗದಂತಾಗಿದೆ. CITU ನ ರಾಷ್ಟ್ರೀಯ ಕಾರ್ಯದರ್ಶಿ ಡಬ್ಲ್ಯೂ. ಆರ್. ವರದರಾಜನ್ ಹೇಳುವಂತೆ "ಕಾರ್ಮಿಕ ಸಂಘಟನೆ ಒಂದು ಜಾಗತಿಕ ಅಗತ್ಯ. ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಇದರಿಂದ ಹೊರತಾಗಿಲ್ಲ. ಆದರೆ ಅಲ್ಲಿನ ಉದ್ಯೋಗಿಗಳೇ ಈ ಕುರಿತು ಅಸಹಕಾರ ತೋರುತ್ತಾರೆ." ಅವರ ಮಾತನ್ನು ಅನುಮೋದಿಸುವ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಉಪಾಧ್ಯಕ್ಷ ಹೆಚ್. ವಿ. ಆನಂದ ಸುಬ್ಬರಾವ್ "ಸಂಸ್ಥೆಗಳು ವಿದೇಶಿಯವು ಎಂಬ ಕಾರಣಕ್ಕೆ ಅವು ಈ ದೇಶದ ಕಾನೂನಿಗೆ ಅತೀತವಾಗಲಾರವು. ಸರ್ಕಾರ ಅಗತ್ಯ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ, ಇಲ್ಲಿಯೂ ಕಾರ್ಮಿಕ ಸುರಕ್ಷತೆ ಸಾಧ್ಯವಾಗಬಲ್ಲದು." ಎನ್ನುತ್ತಾರೆ. ಒಟ್ಟಿನಲ್ಲಿ 'ಕಾಲ್ ಸೆಂಟರ್' ಮಹಿಳಾ ಉದ್ಯೋಗದ ಮೇಲೆ ದೊಡ್ಡ ಪ್ರಮಾಣದ ಸಂಚಲನವನ್ನು ಉಂಟುಮಾಡಿದೆ. ಗ್ರಹಿಕೆಯಲ್ಲೂ ಬದಲಾವಣೆ ತಂದಿದೆ. ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ ರಂಗದ ಮೇಲೆ ಪರಿಣಾಮ ಬೀರಿದೆ. ಆದರೆ ಅದು ಎಷ್ಟರ ಮಟ್ಟಿಗೆ ಉಳಿದುಕೊಳ್ಳುತ್ತದೆ. ಇದು ನಿಜಕ್ಕೂ ಮಿಲಿಯನ್ ಡಾಲರ್ ಪ್ರಶ್ನೆಯೇ ಸರಿ.

❑

ಹೆಣ್ಣು ಭ್ರೂಣಗಳನ್ನು ಗರ್ಭದಲ್ಲೇ ಹೊಸಕುವ, ಪಡೆಯುವ ಒಂದೇ ಮಗು ಗಂಡಾಗಿರಬೇಕು ಎಂದು ಬಯಸುವ ಚೀನೀಯರು ಮುಂದೆ ಹೆಣ್ಣಿಲ್ಲದ ಕಾರಣದಿಂದಲೇ ಭೀಕರ ಅಂತರ್‌ಗಲಭೆಗಳನ್ನು ಎದುರುಗೊಳ್ಳುತ್ತಾರೆ. ಈಗಾಗಲೇ ಮದುವೆಯಾಗಲು ಹೆಣ್ಣು ಸಿಗದೆ ನೂರ ಹನ್ನೊಂದು ಮಿಲಿಯನ್ ಚೈನಿ ಗಂಡಸರು ಪರಿತಪಿಸುತ್ತಿದ್ದಾರೆ. ಈ ದೇಶದಲ್ಲಿ ಬಾಳಸಂಗಾತಿ ಸಿಗದವರ ಸಂಖ್ಯೆ ಕೆನಡಾ ದೇಶದ ಒಟ್ಟು ಜನಸಂಖ್ಯೆಗೆ ಸಮನಾಗಿದೆ. ಈ ಅತೃಪ್ತಿಯಿಂದ ಬಹಳಷ್ಟು ಜನ ಈಗಾಗಲೇ ವಿಚಿತ್ರ ಮನಃಸ್ಥಿತಿಯಿಂದ ಅಪರಾಧಗಳನ್ನು ನೀರು ಕುಡಿದಷ್ಟು ಸಲೀಸಾಗಿ ಮಾಡುತ್ತಿದ್ದಾರೆ. ಇದರಲ್ಲಿ ಕೆಲವರು 'ಸ್ಲೇವ್ ವಿಮೆನ್ ಗ್ಯಾಂಗ್'ಗಳನ್ನು ಕಟ್ಟಿ ವಿಯೆಟ್ನಾಂ ಹಾಗೂ ಮಾರ್ಕಾಂಡಿ ದೇಶಗಳಲ್ಲಿ ಹೆಂಗಸರ ಅಪಹರಣದ ಜಾಲ ಸೃಷ್ಟಿಸಿದ್ದಾರೆ.' ('ಒಡಲ ತುಡಿತಕ್ಕೆ ಕೇಡು'–ಪು.6)

* * *

ಮಂಡ್ಯದ ನರ್ಸಿಂಗ್ ಹೋಂಗಳ ಕಾಂಪೌಂಡ್‌ಗಳಲ್ಲಿ ಇಟ್ಟಾಡುವ, ಕಸದ ತೊಟ್ಟಿಗಳಲ್ಲಿ ಚೆಲ್ಲಾಡುವ ಹೆಣ್ಣುಭ್ರೂಣಗಳನ್ನು ನಾಯಿಗಳು ಎಳೆದಾಡುವ ಘಟನೆಗಳು ಹತ್ತಾರು ಬಾರಿ ನಡೆದಿವೆ. ಮಂಡ್ಯದ ಅನೇಕ ಹೆಣ್ಣುಕೂಸುಗಳು ಈ ಜಗತ್ತಿನ ಗಾಳಿ–ಬೆಳಕಿಗೆ ಕಣ್ಣು ತೆರೆಯುವ ಮೊದಲೇ ಕಸದ ತೊಟ್ಟಿ ಸೇರುತ್ತಿರುವ ಕರುಣಾಜನಕ ಕತೆಗಳಂತೆ ಮಂಡ್ಯದ ನಾಗರಿಕರ ಬಾಯಲ್ಲಿ ಇವೆ. ('ಒಡಲ ತುಡಿತಕ್ಕೆ ಕೇಡು' ಪು. 62)

* * *

ಎಂಬತ್ತರ ದಶಕದಲ್ಲಿ ಮುಂಬಯಿ ತುಂಬಾ ನಾಯಿಕೊಡೆಗಳಂತೆ ತಲೆ ಎತ್ತಿದವು. ಇವುಗಳ ಮಾಲೀಕರು ಬಸ್‌ನಿಲ್ದಾಣ, ರೈಲ್ವೇ ಸ್ಟೇಷನ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ "ನಮ್ಮಲ್ಲಿ ಭ್ರೂಣದ ಲಿಂಗ ನಿರ್ಧರಿಸುವ ಸೌಲಭ್ಯವಿದೆ" "ಮುಂದೆ ವರದಕ್ಷಿಣೆ ಕೊಟ್ಟು ಐವತ್ತು ಸಾವಿರ ಕಳೆದುಕೊಳ್ಳುವ ಬದಲು ಇಂದು ಐನೂರು ರೂಪಾಯಿ ಕಳೆದುಕೊಂಡು ಹೆಣ್ಣೆಂಬ ಸಮಸ್ಯೆಯನ್ನು ಭ್ರೂಣದಲ್ಲೇ ಕಳೆದುಕೊಳ್ಳಿ" ಎಂದೆಲ್ಲಾ ಜಾಹಿರಾತು ಪ್ರಕಟಿಸಿದರು. ('ಒಡಲ ತುಡಿತಕ್ಕೆ ಕೇಡು' ಪು. 94)

* * *

"ನೋಡ್ರಿ ... ಹೆಣ್ಣುಭ್ರೂಣ ಹತ್ಯೆ ಮಾಡ್ತೀವಿ ಅಂತ ನಾವು ಯಾರ ಬಳಿಗೂ ಹುಡುಕಿಕೊಂಡು ಹೋಗೋಲ್ಲ. ಜನ ಅವರೇ ಬರ್ತಾರೆ. ನಮಗೆ ದುಡ್ಡು ಬೇಕು, ಅವರಿಗೆ ಹೆಣ್ಣು ಭ್ರೂಣ ತೆಗೆಸೋದು ಬೇಕು, ಮಧ್ಯೆ ನಿಮ್ಮದೇನ್ರಿ ಕಿರಿ ಕಿರಿ"

('ಒಡಲ ತುಡಿತಕ್ಕೆ ಕೇಡು' ಪು. 96)

'ತತ್ಕಾಲ್ ಪೋಡಿ' ಯೋಜನೆ

ಕರ್ನಾಟಕವು ರೈತರಿಗಾಗಿ 'ಭೂಮಿ ಯೋಜನೆ' ರೂಪಿಸಿ ದೇಶದಲ್ಲೇ ಭೂದಾಖಲೆಗಳನ್ನು ಗಣಕೀಕರಿಸಿದ ಮೊಟ್ಟಮೊದಲ ರಾಜ್ಯ. ವಿಶ್ವ ಸಂಸ್ಥೆಯಿಂದಲೇ ಈ ವಿನೂತನ ಯೋಜನೆಯು ಮೆಚ್ಚುಗೆಗೆ ಪಾತ್ರವಾದುದು ಹೆಮ್ಮೆಯ ಸಂಗತಿ. ರಾಜ್ಯ ಸರ್ಕಾರವು ಈಗ ತನ್ನ ರೈತರಿಗಾಗಿ ಮತ್ತೊಂದು ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಅದುವೇ "ತತ್ಕಾಲ್ ಪೋಡಿ" ಯೋಜನೆ.

ಈ ಯೋಜನೆಯಿಂದ ರೈತರು ತಮ್ಮ ಜಮೀನಿನ ಅಳತೆ ಮತ್ತು ನಕ್ಷೆಯನ್ನು ಪಡೆಯುವರು. ದೋಷರಹಿತ ಮತ್ತು ಯಾರಿಂದಲೂ ತಿದ್ದುಪಡಿಗೆ ಅವಕಾಶವಾಗದ ಈ ದಾಖಲೆಯೊಂದಿಗೆ ರೈತರು ತಮ್ಮ ಜಮೀನಿನ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದಂತಾಗುವುದು. ಅಲ್ಲದೆ ಅವರು ಇನ್ನು ಮುಂದೆ ಮ್ಯುಟೇಷನ್ ಪೋಡಿಗಾಗಿ ಕಾಯಬೇಕಿಲ್ಲ. ಸರ್ಕಾರವು 'ತತ್ಕಾಲ್ ಪೋಡಿ' ಯೋಜನೆ ಹಮ್ಮಿಕೊಂಡಿರುವುದರಿಂದ ಇದರ ಲಾಭ ಪಡೆಯುವವರು, ರೂ: 500/- ಪಾವತಿಸಿದಲ್ಲಿ ಒಂದು ತಿಂಗಳಲ್ಲಿ (ಸಮಸ್ಯೆ ರಹಿತ ದಾಖಲೆಗಳಿಗೆ ಅನ್ವಯ) ಅಳತೆ ಮಾಡಿ ಮ್ಯುಟೇಶನ್ ಪೋಡಿ ದುರಸ್ತಿ ಕಾರ್ಯ ಪೂರೈಸಿ ಹೊಸ ಹಕ್ಕು ದಾಖಲೆ ಒದಗಿಸಲಾಗುವುದು.

ಈ ಕಾರ್ಯಕ್ಕೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಜಾರಿಗೆ ತಂದಿರುವ ಪರವಾನಗಿ ಭೂಮಾಪಕರನ್ನು ಬಳಸಲಾಗುವುದು. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಮೂಲಕ ಕರ್ನಾಟಕವು ಪೋಡಿ ರಹಿತ ರಾಜ್ಯವನ್ನಾಗಿಸುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಿಟ್ಟಿದೆ.

ರೈತರು ಈ ಯೋಜನೆಯ ಲಾಭ ಪಡೆಯಲು ವಿನಂತಿ.

ಹೆಚ್ಚಿನ ಮಾಹಿತಿಗಾಗಿ ರೈತರು ತಮಗೆ ಸಂಬಂಧಿಸಿದ ಈ ಕೆಳಕಂಡ ಯಾವುದಾದರೊಂದು ಕಛೇರಿಯನ್ನು ಸಂಪರ್ಕಿಸಬಹುದು.

1 ತಾಲ್ಲೂಕು ಕಛೇರಿ
2 ಜಿಲ್ಲಾಧಿಕಾರಿಗಳ ಕಛೇರಿ.
3 ಆಯುಕ್ತರು, ಭೂಮಾಪನ ಇಲಾಖೆ, ಬೆಂಗಳೂರು.

ಕರ್ನಾಟಕ ವಾರ್ತೆ

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ–ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು – 560 018